ಸಂಪುಟ : 9 ಸಂಚಿಕೆ 188 ಪುಟ : 4 ಬೆಲೆ: 3.00 ರವಿವಾರ ಸೆಪ್ಟೆಂಬರ್ 1 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 188 Pages : 4 Price : 3.00 Sunday september 1 2024 Gadag RNINo: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಜ.ಫ.ಸಿದ್ದರಾಮ ಶ್ರೀಗಳ ಆಶೀರ್ವಾದ ಪಡೆದ ಸಂಸದ ಪ್ರಹ್ಲಾದ್ ಜೋಶಿ

# ಶ್ರೀಗಳೊಂದಿಗೆ ಅವಿನಾಭಾವ ಸಂಬಂಧವಿದೆ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಶಿರಹಟ್ಟಿಯ ಜ.ಫ. ಸಿದ್ದರಾಮ ಶ್ರೀಗಳೊಂದಿಗೆ ಹಳೆಯ ಮತ್ತು ಅವಿನಾಭಾವ ಸಂಬಂಧವಿದ್ದು, ನನ್ನ ಮೊದಲನೇ ಚುನಾವಣೆಯಿಂದ ಇಲ್ಲಿಯವರೆಗೂ ಅವರ ಆಶೀರ್ವಾದ ನನ್ನ ಮೇಲೆ ಸದಾ ಇದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದರು.

ಅವರು ಶನಿವಾರ ಶಿರಹಟ್ಟಿಯ ಶ್ರೀ ಜ.ಫಕೀರೇಶ್ವರ ಮಠಕ್ಕೆ ಆಗಮಿಸಿ ಕರ್ತೃ ಗದ್ದುಗೆಯ ದರ್ಶನ ಪಡೆದು ನಂತರ ಜ.ಫ.ಸಿದ್ದರಾಮ ಶ್ರೀಗಳಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.



ಮೊದಲನೇ ಚುನಾವಣೆಯಲ್ಲಿ ನನಗೆ ಅನೇಕ ಸವಾಲುಗಳಿದ್ದವು. ಇದರಿಂದ ಕೊಂಚ ಭಯದಲ್ಲಿದ್ದ ನನಗೆ ಅದರಗುಂಜಿಯಲ್ಲಿ ಜ.ಫ.ಸಿದ್ದರಾಮ ಶ್ರೀಗಳು ಕರೆದು, ಚುನಾವಣೆಯಲ್ಲಿ ನೀನೆ ಗೆಲ್ಲುತ್ತಿ, ಭಯ ಪಡಬೇಡ ಎಂದು ಹೇಳಿದ್ದರು. ಅದರಂತೆ ನಾನು ಚುನಾವಣೆಯಲ್ಲಿ ಗೆಲುವು ಸಾಧಿಸಿದೆ. ಅವರಿಗೆ ಮತ್ತು ಶ್ರೀ ಪೀಠಕ್ಕೆ ನಾನು ಸದಾ ಚಿರಋಣಿಯಾಗಿರುತ್ತೇನೆ ಎಂದರು.

ಜ.ಫ.ಸಿದ್ದರಾಮ ಶ್ರೀಗಳು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಒಳ್ಳೆಯ ಬಾಂಧವ್ಯವನ್ನು ಹೊಂದಿರುವ ಪ್ರಹ್ಲಾದ ಜೋಶಿಯವರಿಂದ ಇನ್ನೂ ಹೆಚ್ಚಿನ ಸತ್ಕಾರ್ಯಗಳು ನಡೆಯಲಿ. ಶ್ರೀ ಪೀಠದಲ್ಲಿ ಅವರಿಂದ ಅಜರಾಮರವಾಗಿ ಉಳಿಯುವಂತಹ ಕೆಲಸ ಆಗಬೇಕೆಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಶಾಸಕ ಡಾ. ಚಂದ್ರು ಲಮಾಣಿ, ಕುಂದಗೋಳ ಶಾಸಕ ಎಂ.ಆರ್. ಪಾಟೀಲ, ರವಿ ಛಬ್ಬಿ, ಸಿ.ಸಿ. ನೂರಶೆಟ್ಟರ, ರಾಜು ಕುರಡಗಿ, ನಾಗರಾಜ ಲಕ್ಕುಂಡಿ, ಫಕ್ಕೀರೇಶ ರಟ್ಟಿಹಳ್ಳಿ, ಜಾನು ಲಮಾಣಿ, ಶಂಕರ ಮರಾಠೆ, ಕೆ.ಎ.ಬಳಿಗೇರ, ರವಿ ದಂಡಿನ, ಶರಣು ಅಂಗಡಿ, ಮುತ್ತು ಮಜ್ಜಗಿ, ಅಶೋಕ ವರವಿ, ಗೂಳಪ್ಪ ಕರಿಗಾರ ಮುಂತಾದವರು ಉಪಸ್ಥಿತರಿದ್ದರು.

## ತಪ್ಪು ಮಾಡಿದವರಿಗೆ ಭಯ ಕಾಡುತ್ತದೆ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಯಾರು ತಪ್ಪು ಮಾಡಿರುತ್ತಾರೋ ಅವರಿಗೆ ಭಯ ಇದ್ದೇ ಇರುತ್ತದೆ. ಸಿಎಂ ಸಿದ್ದರಾಮಯ್ಯ ಮುಡಾದಲ್ಲಿ 14 ಸೈಟ್ ಪಡೆದಿದ್ದಷ್ಟೇ ಅಲ್ಲ, 500ಕ್ಕೂ ಹೆಚ್ಚು ಸೈಟ್‌ಗಳನ್ನು ಹಂಚಿದ್ದಾರೆ. ಪದೇ ಪದೇ ನಾನು ಹಿಂದುಳಿದವನು ಎಂದು ಹೇಳ್ತಾರೆ. ಕಾಂಗ್ರೆಸ್‌ನಲ್ಲಿ ದಲಿತರಿಗೆ, ಓಬಿಸಿಗಳಿಗೆ ಯಾವತ್ತೂ ಬೆಲೆ ಇಲ್ಲ. ನೆಹರು ನಂತರ 40 ವರ್ಷ ಕಾಂಗ್ರೆಸ್ ಸರಕಾರ ಇತ್ತು. ಅವರಿಗೆ ಭಾರತ ರತ್ನ ಕೊಡಲಿಲ್ಲ. ಇವರನ್ನು ಸೋಲಿಸಿದವರಿಗೆ ಭಾರತರತ್ನ, ಪದ್ಮಭೂಷಣ ಕೊಟ್ಟರು ಎಂದು ಸಂಸದ ಪ್ರಹ್ಲಾದ ಜೋಶಿ ಕಾಂಗ್ರೆಸ್ ಪಕ್ಷದ ವಿರುದ್ಧ ವ್ಯಂಗ್ಯವಾಡಿದರು.

ಅವರು ಶನಿವಾರ ಶಿರಹಟ್ಟಿಯ ಶ್ರೀ ಜ.ಫಕೀರೇಶ್ವರ ಮಠಕ್ಕೆ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಇವೆಲ್ಲ ಗಮನಿಸಿದರೆ ಕಾಂಗ್ರೆಸ್ ಎಸ್‌ಸಿ/ಎಸ್‌ಟಿ/ಓಬಿಸಿಗೆ ವಿರುದ್ಧವಾಗಿದೆ. ಬಿಜೆಪಿ ಪಕ್ಷ ಡಾ. ಬಿ.ಆರ್. ಅಂಬೇಡ್ಕರ ಅವರಿಗೆ ಭಾರತರತ್ನ ಕೊಡುವುದರಲ್ಲಿ, ಜಗಜೀವನರಾಮ ಅವರನ್ನು ಪ್ರಧಾನಿ ಮಾಡುವುದರಲ್ಲಿ ಸರ್ವ ಪ್ರಯತ್ನ ಮಾಡಿದೆ. ಪ್ರಧಾನಿ ಮೋದಿ ಅವರ 2 ಅವಧಿಯಲ್ಲಿ ಅತ್ಯಧಿಕ ಓಬಿಸಿ ಮಂತ್ರಿಗಳಿದ್ದರು. ತಪ್ಪು ಮಾಡಿ ಜಾತಿ ಹೆಸರಿನಲ್ಲಿ ರಕ್ಷಣೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಪಕ್ಷವು ಕಾಂಗ್ರೆಸ್ ಸರಕಾರವನ್ನು ಬೀಳಿಸದು. ಇದು ಸ್ಪಷ್ಟ ನನ್ನ ಹಾಗೂ ಪಕ್ಷದ ಅಭಿಪ್ರಾಯ. ಕಾಂಗ್ರೆಸ್ ಪಕ್ಷ 136 ಸೀಟುಗಳನ್ನು ಹೊಂದಿದೆ. ನಾವು ಸರಕಾರ ಬೀಳಿಸುವ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ನಿಮಗೆ ಯಾಕೆ ಭಯ ಸಿದ್ದರಾಮಯ್ಯನವರೇ ಎಂದು ಪ್ರಶ್ನಿಸಿದ ಅವರು, ಸಿಎಂ ಸಿದ್ದರಾಮಯ್ಯ ತಪ್ಪು ಮಾಡಿದ್ದಾರೆ. ಅವರಿಗೆ ಭಯ ಕಾಡುತ್ತಿದೆ. ರಾಜಭವನಕ್ಕೆ ಹೋಗುವ ಬದಲು ಮುಡಾಗೆ ಹೋಗಬೇಕಾಗಿತ್ತು. ಅದನ್ನು ಬಿಟ್ಟು ಅಲ್ಲಿಯ ಅಧಿಕಾರಿಯನ್ನು ಹಾವೇರಿಯ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

### ಜ.ಫ. ದಿಂಗಾಲೇಶ್ವರ ಶ್ರೀ ದೊಡ್ಡವರು

ಸ್ಥಳೀಯ ಶಾಸಕ ಡಾ. ಚಂದ್ರು ಲಮಾಣಿ ಅವರಿಗೆ ನಿನ್ನೆಯೇ ಶಿರಹಟ್ಟಿ ಮಠಕ್ಕೆ ಆಗಮಿಸುವ ಬಗ್ಗೆ ತಿಳಿಸಿದ್ದೆ. ಜ.ಫ. ದಿಂಗಾಲೇಶ್ವರ ಶ್ರೀಗಳ ಆಶೀರ್ವಾದ ಇಂದಲ್ಲ ನಾಳೆ ತೆಗೆದುಕೊಳ್ಳುತ್ತೇನೆ. ಏನಾದರೂ ತಪ್ಪಾಗಿದ್ದರೆ ನಮ್ಮನ್ನು ಕ್ಷಮಿಸಿ ಆಶೀರ್ವಾದ ಮಾಡಿ ಅಂತಾ ಕೇಳಿಕೊಳ್ಳುತ್ತೇವೆ. ಸಂವಹನದ ಕೊರತೆಯಾದರೆ ಮತ್ತೊಮ್ಮೆ ಬಂದು ಹೋಗುತ್ತೇನೆ. ಅವರು ದೊಡ್ಡವರು, ಅವರ ಆಶೀರ್ವಾದ ನಮಗೆ ಬೇಕು ಎಂದು ಪ್ರಹ್ಲಾದ ಜೋಶಿ ಹೇಳಿದರು

## ಆಸ್ತಿ ತೆರಿಗೆ ಪಾವತಿ ರಿಯಾಯಿತಿ ಅವಧಿ ವಿಸ್ತರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಸೆಪ್ಟೆಂಬರ್ 14ರಂದು ಜರುಗುವ ರಾಷ್ಟ್ರೀಯ ಲೋಕಅದಾಲತ್ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 2024–2025ನೇ ಸಾಲಿನ ಆಸ್ತಿ ತೆರಿಗೆ ಪಾವತಿಗೆ ನೀಡಲಾಗುತ್ತಿರುವ ಶೇ.5ರ ರಿಯಾಯತಿ ಅವಧಿಯನ್ನು ಸೆ.14ರವರೆಗೆ ವಿಸ್ತರಣೆ ಮಾಡಿ ಆದೇಶಿಸಿದೆ.

ಕಾರಣ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಗೆ ಇರುವ ಶೇ.5ರ ರಿಯಾಯಿತಿಯ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸಿ.ಎಸ್. ಶಿವನಗೌಡ್ರ ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

## ಪೊಲೀಸ್ ಚೌಕಿ, ಸಿಸಿ ಕ್ಯಾಮರಾಗಳನ್ನು ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

## ವೈಜ್ಞಾನಿಕ ಮಾದರಿಯಲ್ಲಿ ಬದಲಾವಣೆ




**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ಶನಿವಾರ ಪೊಲೀಸ್ ಚೌಕಿ, ಟ್ರಾಫಿಕ್ ಸಿಗ್ನಲ್ ಹಾಗೂ ಸಿಸಿ ಕ್ಯಾಮರಾಗಳನ್ನು ಶಾಸಕ ಜಿ.ಎಸ್. ಪಾಟೀಲ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗಜೇಂದ್ರಗಡ ಪಟ್ಟಣ ಸಾಕಷ್ಟು ಬೆಳವಣಿಗೆ ಹೊಂದುತ್ತಿದ್ದು, ವಾಹನಗಳ ದಟ್ಟಣೆ ಹೆಚ್ಚಾಗಿ ಟ್ರಾಫಿಕ್ ಸಮಸ್ಯೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕ ಮಾದರಿಯಲ್ಲಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ. ತರಕಾರಿ, ಹಣ್ಣು, ಹೂ ವ್ಯಾಪಾರಸ್ಥರಿಗೆ ಬೇರೆಡೆ ಸ್ಥಳಾಂತರಗೊಳಿಸಲಾಗಿದೆ. 1985ರಲ್ಲಿ ಎಪಿಎಂಸಿ ಅಧ್ಯಕ್ಷನಿದ್ದಾಗ ಹೊಸದಾಗಿ ಎಪಿಎಂಸಿ ಮಾರುಕಟ್ಟೆಯನ್ನು ಪ್ರಾರಂಭಿಸಿದ್ದೆ. ಈಗ ಅಲ್ಲಿಯೂ ಸಹ ಜಾಗೆಯ ಕೊರತೆಯ ಬಗ್ಗೆ ಗಮನಕ್ಕೆ ಬಂದಿದೆ. ಹೀಗಾಗಿ ಶೀಘ್ರದಲ್ಲೇ 40 ಎಕರೆ ಜಾಗೆಯಲ್ಲಿ ನೂತನ ಮಾರುಕಟ್ಟೆಯ ನಿರ್ಮಾಣಕ್ಕೆ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದರು.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಮಾತನಾಡಿ, ಗದಗ–ಬೆಟಗೇರಿ ಅವಳಿ ನಗರವನ್ನು ಬಿಟ್ಟರೆ ಗಜೇಂದ್ರಗಡ ಪಟ್ಟಣದಲ್ಲಿ ಟ್ರಾಫಿಕ್ ಸಿಗ್ನಲ್, ಸಿಸಿ ಕ್ಯಾಮರಾ ಅಳವಡಿಕೆ ಹಾಗೂ ಪ್ರಮುಖ ಕಾಲಕಾಲೇಶ್ವರ ವೃತದಲ್ಲಿ ಪೋಲಿಸ್ ಚೌಕಿಯ ನಿರ್ಮಾಣವನ್ನು ಸ್ಥಳಿಯ ಪುರಸಭೆ, ಶಾಸಕರ ನಿಧಿಯಿಂದ ನಿರ್ಮಾಣ ಮಾಡಲಾಗಿದೆ. ಸಂಚಾರಿ ನಿಯಮಗಳ ಅನುಷ್ಠಾನಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ, ಡಿವೈಎಸ್‌ಪಿ ಪ್ರಭುಗೌಡ ಕಿರೇದಳ್ಳಿ, ಸಿಪಿಐ ಸಿದ್ದು ಬೀಳಗಿ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಪಿಎಸ್‌ಐ ಸೋಮನಗೌಡ ಗೌಡ್ರ, ಪುರಸಭೆ ವಿಪಕ್ಷನಾಯಕ ಮುರ್ತುಜಾ ಡಾಲಾಯತ, ಸದಸ್ಯರಾದ ಶಿವರಾಜ ಘೋರ್ಪಡೆ, ರಾಜು ಸಾಂಗ್ಲಿಕರ, ವೆಂಕಟೇಶ ಮುದಗಲ್ಲ ಹಾಗೂ ಸಿದ್ದಣ್ಣ ಬಂಡಿ, ಚಂಬಣ್ಣ ಚವಡಿ, ನಾಗುಸಾ ಬಸವಾ, ಎ.ಡಿ. ಕೋಲಕಾರ, ಉಮೇಶ ರಾಠೋಡ, ಶ್ರೀಧರ ಬಿದರಳ್ಳಿ, ಸಿದ್ದು ಗೊಂಗಡಶೆಟ್ಟಿಮಠ, ತುಳಸಿನಾಥ ಮಾಳೊತ್ತರ, ಅಂದಪ್ಪ ರಾಠೋಡ ಸೇರಿದಂತೆ ಇತರರು ಇದ್ದರು.

## ಶೀಘ್ರವೇ ಹಾಸ್ಟೆಲ್‌ಗಳ ಕಾರ್ಯಾರಂಭವಾಗಲಿ

**■ವಿಜಯಸಾಕ್ಷಿ ಸುದ್ದಿ, ಹಾವೇರಿ**

ಹಾವೇರಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮಂಜೂರಾದ 5 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಹುದ್ದೆಗಳನ್ನು ಸೃಜಿಸಿ ರಾಜ್ಯ ಸರ್ಕಾರ ಆದೇಶ ಮಾಡಿರುವುದನ್ನು ಸ್ವಾಗತಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನಮ್ಮ ಸರ್ಕಾರದ ಅವಧಿಯಲ್ಲಿ ಹಾವೇರಿ ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ ಐದು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಆದೇಶಿಸಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಸರ್ಕಾರ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ಕುರಿತು ವಿಳಂಬ ಧೋರಣೆ ಅನುಸರಿಸಿದ್ದು, ತಡವಾಗಿಯಾದರೂ ಹುದ್ದೆಗಳನ್ನು ಸೃಜಿಸಿ ಆದೇಶಿಸಿರುವುದು ಸ್ವಾಗತಾರ್ಹ. ನಮ್ಮ ಅವಧಿಯಲ್ಲಿ ಮೂರು ಕಟ್ಟಡಗಳ ನಿರ್ಮಾಣ ಮಾಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ವಿದ್ಯಾರ್ಥಿ ನಿಲಯಗಳ ಕಾರ್ಯಾರಂಭ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಕ್ರಮ ವಹಿಸಬೇಕೆಂದು ಆಗ್ರಹಿಸುವುದಾಗಿ ತಿಳಿಸಿದ್ದಾರೆ.

## ಅಂಗಡಿಗಳಿಗೆ ಭೇಟಿ, ಅವ್ಯವಸ್ಥೆ ಕಂಡ ಬಂದವರಿಗೆ ನೋಟಿಸ್

**■ವಿಜಯಸಾಕ್ಷಿ ಸುದ್ದಿ, ಗದಗ**

ಆರೋಗ್ಯ ಸಚಿವರು ಹಾಗೂ ಆಹಾರ ಸುರಕ್ಷತಾ ಆಯುಕ್ತರ ಆದೇಶದಂತೆ ರಾಜ್ಯಾದ್ಯಂತ ಎಲ್ಲ ಜಿಲ್ಲೆಗಳಲ್ಲೂ ಶುದ್ಧ ಆಹಾರ ನೀಡುವ ಬಗ್ಗೆ ಅರಿವು ಮೂಡಿಸುವುದು, ನೋಂದಣಿ ಮತ್ತು ಪರವಾನಿಗೆ ಬಗ್ಗೆ ಜಾಗೃತಿ ಮೂಡಿಸುವುದು, ಹೋಟೆಲ್ ಬೀದಿ ಬದಿ ವ್ಯಾಪಾರಸ್ಥರು, ಬೇಕರಿಯವರು, ರೆಸ್ಟೋರೆಂಟ್‌ಗಳಲ್ಲಿ ಸ್ವಚ್ಛತೆಯ ಅರಿವು ಮೂಡಿಸುವುದು, ಮತ್ತು ಪರಿಶೀಲಿಸುವುದು ಹಾಗೂ ದಂಡ ವಿಧಿಸುವುದು ಸೇರಿದಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.




ಅದರನ್ವಯ ಗದಗ ಜಿಲ್ಲೆಯಲ್ಲಿ ಆಗಸ್ಟ್ 30ರಂದು 43 ಆಹಾರ ಉದ್ದಿಮೆದಾರರ ಅಂಗಡಿಗಳಿಗೆ ಭೇಟಿ ನೀಡಿ, ಪರಿಶೀಲಿಸಿಲಾಯಿತು.

ಕೆಲವರಿಗೆ ನೋಟಿಸ್ ಜಾರಿ ಮಾಡಿ 13,000/– ರೂ.ಗಳನ್ನು ದಂಡ ವಿಧಿಸಲಾಯಿತು. ಆಗಸ್ಟ್ 31 ರಂದು 39 ಆಹಾರ ಉದ್ದಿಮೆದಾರರ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿ ನೋಟಿಸ್ ಜಾರಿ ಮಾಡಿ 19,100 ರೂ.ಗಳನ್ನು ದಂಡ ವಿಧಿಸಲಾಯಿತು ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ವಚನ ಶ್ರಾವಣ ಮಂಗಲೋತ್ಸವ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಸೆ.1ರಂದು ಬೆಳಿಗ್ಗೆ 11ಕ್ಕೆ ನಡೆಯಲಿರುವ ಬಸವದಳದ 1609ನೇ ಶರಣ ಸಂಗಮದಲ್ಲಿ ವಚನ ಶ್ರಾವಣ–2024ರ ಮಂಗಲೋತ್ಸವ ಕಾರ್ಯಕ್ರಮ ಜರುಗುವುದು. ಕಾರ್ಯಕ್ರಮದ ಸಾನ್ನಿಧ್ಯವನ್ನು ಪೂಜ್ಯಶ್ರೀ ಮ.ನಿ.ಪ್ರ ಡಾ. ಮಹಾಂತ ಬಸವಲಿಂಗ ಸ್ವಾಮಿಗಳು, ಶ್ರೀಗುರು ಬಸವೇಶ್ವರ ಮಠ, ಬೇಲೂರು ಇವರು ವಹಿಸಲಿರುವರು. ಅಧ್ಯಕ್ಷತೆಯನ್ನು ಬಸವದಳದ ಅಧ್ಯಕ್ಷ ಶರಣ ವಿ.ಕೆ. ಕರೇಗೌಡ್ರ ವಹಿಸುವರು.

ವಚನ ಚಿಂತನೆಯನ್ನು ನಿಂಗಮ್ಮ ಹೂಗಾರ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್.ಎಸ್. ಹರ್ಲಾಪೂರ ಮಾಡುವರು. ಶರಣ ವಿ.ಪ ಸದಸ್ಯ ಪ್ರೊ. ಎಸ್.ವಿ. ಸಂಕನೂರ, ಶರಣ ಚಂದ್ರಶೇಖರ ಬಿ.ತಡಸದ, ಶರಣೆ ವಿದ್ಯಾವತಿ ಎ.ಗಡಗಿ, ಪ್ರೊ. ಚಂದ್ರಶೇಖರ ವಸ್ತ್ರದ, ಶರಣ ಬಾಲಚಂದ್ರ ಭರಮಗೌಡ್ರ, ಶರಣ ಕೆ.ಎಸ್. ಚೆಟ್ಟಿ, ಶರಣ ಎಸ್.ಎಂ. ಕವಳಿಕಾಯಿ, ಶರಣ ಶೇಖಣ್ಣ ಎಸ್.ಕಳಸಾಪೂರಶೆಟ್ರು ಅತಿಥಿಗಳಾಗಿ ಆಗಮಿಸುವರು. ಕಾರಣ ಬಸವದಳ, ಬಸವಕೇಂದ್ರ ಹಾಗೂ ಲಿಂಗಾಯತ ಪ್ರಗತಿಶೀಲ ಸಂಘ, ಗದಗ ತಾಲೂಕಾ ಶರಣ ಸಾಹಿತ್ಯ ಪರಿಷತ್ ಸದಸ್ಯರು, ಶರಣ ಸಾಹಿತ್ಯಾಭಿಮಾನಿಗಳು ಹಾಗೂ ಆಸಕ್ತರು ಭಾಗವಹಿಸಬೇಕೆಂದು ಸಂಘಟಿಕರ ಪರವಾಗಿ ಪ್ರಕಾಶ ಅಸುಂಡಿಯವರು ವಿನಂತಿಸಿದ್ದಾರೆ.

## ಅರ್ಜಿ ಸಲ್ಲಿಸುವಾಗ ಜಾಗ್ರತೆ ವಹಿಸಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಎಸ್‌ಟಿಪಿಎಂಬಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 2024–25ನೇ ಸಾಲಿನಲ್ಲಿ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ 8ನೇ ತರಗತಿ ವಿದ್ಯಾರ್ಥಿಗಳಿಗೆ ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಅರ್ಹತೆ ಪಡೆಯಲು ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕುರಿತು ಪ್ರೌಢಶಾಲಾ ಮುಖ್ಯೋಪಾಧ್ಯಾಯರುಗಳಿಗೆ ಕಾರ್ಯಗಾರವನ್ನು ಆಯೋಜಿಸಲಾಗಿತ್ತು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್. ನಾಯಕ್‌ರವರು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಅನೂಕೂಲವಾಗುವ ನಿಟ್ಟಿನಲ್ಲಿ ಎನ್‌ಎಂಎಂಎಸ್ ಅವಕಾಶ ಕಲ್ಪಿಸಿದ್ದು, ಅರ್ಜಿ ಸಲ್ಲಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯುಂತೆ ಮಾಡುವ ನಿಟ್ಟಿನಲ್ಲಿ ಅರ್ಜಿಗಳನ್ನು ಸರಿಯಾಗಿ ಸಲ್ಲಿಸುವದಕ್ಕೆ ಆದ್ಯತೆ ನೀಡಿ. ಇದಕ್ಕಾಗಿ ಇರುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಮಾಡುವದು ಸಹ ಅವಶ್ಯವಾಗಿದ್ದು, ಇದಕ್ಕಾಗಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಮಕ್ಕಳನ್ನು ಸಿದ್ಧಪಡಿಸಿ ಎಂದು ಕರೆ ನೀಡಿದರು. ತರಬೇತಿ ಸಂಸ್ಥೆಯ ಉಪನ್ಯಾಸಕರು ಹಾಗೂ ಎನ್‌ಎಂಎಂಎಸ್ ನೋಡಲ್ ಅಧಿಕಾರಿ ಹೆಚ್.ಬಿ. ರೆಡ್ಡೇರ್ ಅರ್ಜಿ ಸಲ್ಲಿಕೆಯಲ್ಲಿ ಉಂಟಾಗುವ ಸಮಸ್ಯೆಗಳಿಗೆ ಉತ್ತರಿಸಿ, ತಾಲೂಕಿನ ಎಲ್ಲಾ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ನೋಂದಾಯಿಸಲು ಸೂಚಿಸಿದರು.

ಸರ್ಕಾರದಿಂದ ಪಡೆಯುವ ಈ ವಿದ್ಯಾರ್ಥಿ ವೇತನದ ಪ್ರಯೋಜನವನ್ನು ಹೆಚ್ಚಿನ ವಿದ್ಯಾರ್ಥಿಗಳು ಪಡೆಯುವಂತೆ ಕ್ರಮವಹಿಸಲು ತಿಳಿಸಿದರು.ಈ ಸಂದರ್ಭದಲ್ಲಿ ಇಸಿಓ ಉಮೇಶ ಹುಚ್ಚಯ್ಯನಮಠ, ಹರೀಶ್ ಲಕ್ಷ್ಮೇಶ್ವರ, ಉರ್ದು ಕ್ಲಸ್ಟರ್ ಸಿಆರ್‌ಪಿ ಎನ್.ಎ. ಮುಲ್ಲಾ, ಎಸ್‌ಟಿಪಿಬಿಎಂಬಿ ಶಾಲೆಯ ಮುಖ್ಯೋಪಾಧ್ಯಾಯೆ ಸ್ವಾತಿ ಪೈ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಹಾಜರಿದ್ದರು.



## ಸಂಪಾದಕೀಯ

# ಕ್ಷಮೆ ಕೇಳಿದ್ದು ಸರಿ, ಭ್ರಷ್ಟಾಚಾರದ ಬಗ್ಗೆಯೂ ಪ್ರಧಾನಿ ನರೇಂದ್ರ ಮೋದಿ ಮಾತನಾಡಲಿ

ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ರಾಜ್ ಕೋಟ್ ಕೋಟೆಯಲ್ಲಿ ನಿರ್ಮಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಉರುಳಿಬಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಖುದ್ದು ಪ್ರಧಾನಿ ನರೇಂದ್ರ ಮೋದಿ ದೇಶದ ಜನರ ಕ್ಷಮೆಯಾಚನೆ ಮಾಡಿದ್ದಾರೆ.

ಛತ್ರಪತಿ ಶಿವಾಜಿ ಮಹಾರಾಜ ದೇವರಿದ್ದಂತೆ. ದೇವರ ಪ್ರತಿಮೆ ಉರುಳಿಬಿದ್ದ ಘಟನೆಗೆ ನಾನು ಅವರ ಪಾದಗಳಿಗೆ ಎರಗಿ ಕ್ಷಮೆಯಾಚಿಸುವೆ ಎನ್ನುವ ಮೂಲಕ ಪ್ರಧಾನಿ ಮೋದಿ ತಮ್ಮ ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಪ್ರತಿಮೆ ನಿರ್ಮಾಣದಲ್ಲಿ ಆಗಿರುವ ಭ್ರಷ್ಟಾಚಾರದ ಬಗ್ಗೆ ಕಿಂಚಿತ್ತೂ ಮಾತನಾಡಿಲ್ಲ.

ಪ್ರತಿಮೆ ಉರುಳಿ ಬಿದ್ದಿರುವ ಬಗ್ಗೆ ವಿಷಾದವಿದ್ದರೆ ತಕ್ಷಣವೇ ಜನರ ಕ್ಷಮೆಯಾಚನೆ ಮಾಡಬೇಕಿತ್ತು. ಆದರೆ ಮಹಾರಾಷ್ಟ್ರದ ಪಾಲ್ಘರ್ ಗೆ ಭೇಟಿ ನೀಡಿದ ಸಂದರ್ಭದಲ್ಲಿ ಕ್ಷಮೆಯಾಚನೆ ಮಾಡಿರುವುದರ ಹಿಂದೆ ರಾಜಕೀಯ ಉದ್ದೇಶ ಅಡಗಿದೆ. ಛತ್ರಪತಿ ಶಿವಾಜಿ ಮಹಾರಾಜ ಕೇವಲ ಮಹಾರಾಷ್ಟ್ರಕ್ಕೆ ಸೀಮಿತವಲ್ಲ ಎನ್ನುವುದನ್ನು ಪ್ರಧಾನಿ ಅರ್ಥ ಮಾಡಿಕೊಂಡಂತಿಲ್ಲ.

ದಶಕಗಳ ಹಿಂದೆಯೇ ಪ್ರಧಾನಿ ನರೇಂದ್ರ ಮೋದಿ, ನಾ ಮೈ ಖಾವುಂಗಾ, ನಾ ಖಾನೇ ದೂಂಗಾ (ನಾನು ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ) ಎಂದು ಭ್ರಷ್ಟಾಚಾರದ ಕುರಿತಾದ ತಮ್ಮದೇ ವ್ಯಾಖ್ಯಾನ ಮಾಡಿದ್ದರು. ಆದರೆ ಅದು ಎಳ್ಳಷ್ಟು ಪಾಲನೆಯಾಗುತ್ತಿಲ್ಲ ಎನ್ನುವುದು ಬೇರೆ ಮಾತು.

ಆದರೆ ಮಹಾತ್ಮರ ಪ್ರತಿಮೆ ನಿರ್ಮಾಣದಲ್ಲಾದರೂ ಪ್ರಾಮಾಣಿಕತೆ ಇರುವಂತೆ ನೋಡಿಕೊಳ್ಳಲು ಸಾಧ್ಯವಾಗದ ಕೇಂದ್ರ ಸರಕಾರಕ್ಕೆ, ದೇಶದಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನಡೆಸುತ್ತೇವೆ ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದ ಎನಿಸುತ್ತದೆ.

ದೇಶವಾಸಿಗಳ ತೆರಿಗೆ ಹಣದಲ್ಲಿ ಕೋಟ್ಯಾಂತರ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ನಿರ್ಮಾಣದಲ್ಲಿ ಈ ರೀತಿಯ ಅಸಡ್ಡೆಯಾದರೆ, ದೇಶದ ಆಡಳಿತ ವ್ಯವಸ್ಥೆ ಯಾವ ರೀತಿ ಇದೆ ಎನ್ನುವುದು ಅರ್ಥವಾಗುತ್ತದೆ.

ತನ್ನ ಮಿತ್ರ ಪಕ್ಷದ ಅಧಿಕಾರಾವಧಿಯಲ್ಲಿ ಇಂಥದ್ದೊಂದು ತಲೆ ತಗ್ಗಿಸುವಂಥ ಕೆಲಸ ನಡೆದಾಗಲೂ ಭ್ರಷ್ಟಾಚಾರದ ಬಗ್ಗೆ ಪ್ರಧಾನಿ ಮೌನ ವಹಿಸಿರುವುದು ರಾಜಕೀಯ ಅಲ್ಲದೇ ಮತ್ತೇನು? ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರ ಸರಕಾರದ ವಿರುದ್ಧ ಮಾತನಾಡುವ ಶಕ್ತಿ ಇಲ್ಲವೇ ಎನ್ನುವಂಥ ಪ್ರಶ್ನೆಗಳು ಮೂಡುತ್ತವೆ.

# ಸಾರ್ವಜನಿಕರ ಗಮನಕ್ಕೆ


■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ನರೇಗಲ್ ಪಟ್ಟಣದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕಾರ್ಯಾಲಯದ ವ್ಯಾಪ್ತಿಯಲ್ಲಿ ಬರುವ ರಿ.ಸ.ನಂ 199//4 ರಲ್ಲಿನ ನಾಗರಿಕ ಸೌಲಭ್ಯಕ್ಕೆ ಮೀಸಲು ಇರುವ ಆಸ್ತಿ ನಂ. 343 ಪ್ಲಾಟ್ ನಂ. 24 ರ ಒಟ್ಟು ವಿಸ್ತೀರ್ಣ 291.10 ಚದರ ಮೀಟರ ಜಾಗೆಯನ್ನು ನರೇಗಲ್ ಪಟ್ಟಣದಲ್ಲಿ ಕೃಷಿ ಅಧಿಕಾರಿಗಳು ರೈತ ಸಂಪರ್ಕ ಕೇಂದ್ರಕ್ಕೆ, ಕೃಷಿ ಪರಿಕರಗಳ ಸಂಗ್ರಹಕ್ಕೆ ಗೋದಾಮು ಸ್ಥಾಪಿಸಲು ಮತ್ತು ನರೇಗಲ್ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ರಿ ಸ ನಂ. 226//3 ರಲ್ಲಿನ ನಾಗರಿಕ ಸೌಲಭ್ಯಕ್ಕೆ ಮೀಸಲು ಇರುವ ಆಸ್ತಿ ನಂ. 350 ಪ್ಲಾಟ್ ನಂ. 25 ರ ಒಟ್ಟು ವಿಸ್ತೀರ್ಣ 296.59 ಚದರ ಮೀಟರ ಜಾಗೆಯನ್ನು ನರೇಗಲ್ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದವರು ಆರೋಗ್ಯ ಮಂದಿರ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಮಂಜೂರು ಮಾಡಲು ನಿಯಮಾನುಸಾರವಾಗಿ ಠರಾವು ಪಾಸು ಮಾಡಲಾಗಿದೆ.

ಸಾರ್ವಜನಿಕರು ಈ ಬಗ್ಗೆ ಆಕ್ಷೇಪಣೆ, ಸಲಹೆ ಸೂಚನೆಗಳು ಇದ್ದಲ್ಲಿ ಈ ಪ್ರಕಟಣೆ ಪ್ರಚುರಗೊಂಡ 07 ದಿನಗಳ ಒಳಗಾಗಿ ನರೇಗಲ್ ಪಟ್ಟಣ ಪಂಚಾಯತ್ ಕಾರ್ಯಾಲಯಕ್ಕೆ ಲಿಖಿತವಾಗಿ ಸ್ಪಷ್ಟ ಕಾರಣಗಳೊಂದಿಗೆ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು ಎಂದು ನರೇಗಲ್ ಪಟ್ಟಣ ಪಂಚಾಯತ್ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ನರೇಗಲ್ ಪಟ್ಟಣ ಪಂಚಾಯತ್ ಕಾರ್ಯಾಲಯದ ಮುಖ್ಯಾಧಿಕಾರಿ ದೂ.ಸಂ. 9741377297 ಸಂಪರ್ಕಿಸಬಹುದಾಗಿದೆ.

# ಅತಿಥಿ ಉಪನ್ಯಾಸಕರ ಸೇವಾ ಭದ್ರತೆಗೆ ಮೊದಲ ಹೆಜ್ಜೆ

■ ವಿಜಯಸಾಕ್ಷಿ ಸುದ್ದಿ, ಗದಗ



2024 – 25ನೇ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಸಲುವಾಗಿ ಆನ್‌ಲೈನ್ ಅರ್ಜಿಗೆ ಉನ್ನತ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿರುವುದು ಸ್ವಾಗತಾರ್ಹ ಎಂದು ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಡಾ.ಹನುಮಂತಗೌಡ ಅರ್.ಕಲ್ಮನಿ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಅತಿಥಿ ಉಪನ್ಯಾಸಕರನ್ನು ಮುಂದುವರೆಸುತ್ತಿರುವುದು ಸಂತಸದ ವಿಷಯವಾಗಿದ್ದು, ನಮಗೆ ಸೇವಾ ಭದ್ರತೆ ನೀಡುವ ನಿಟ್ಟಿನಲ್ಲಿ ಸರ್ಕಾರ ಇಟ್ಟ ಮೊದಲ ಹೆಜ್ಜೆಯಾಗಿದೆ. ಅತಿಥಿ ಉಪನ್ಯಾಸಕರ ಬೇಡಿಕೆಗಳಿಗೆ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಅತಿಥಿ ಉಪನ್ಯಾಸಕರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ಜನವರಿ 2025ರೊಳಗೆ ಗಉಅ ಅರ್ಹತೆಯ ಮಾನದಂಡದ ತೂಕಗತ್ತಿ ಆತಂಕಕ್ಕೆ ಎಡೆ ಮಾಡಿಕೊಟ್ಟಿದ್ದು, ಇದರಿಂದ ವಿನಾಯಿತಿ ನೀಡಬೇಕು ಎಂದಿದ್ದಾರೆ.

ಈ ವರ್ಷ ಖಇಕ ಜಾರಿಯಿಂದಾಗಿ ಕಾರ್ಯಭಾರದ ಕೊರತೆ ಉಂಟಾಗಿದ್ದು, ಬಹಳಷ್ಟು ಜನ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳಲಿದ್ದಾರೆ. ಒಂದು ತರಗತಿಗೆ ನೂರು ಜನ ವಿದ್ಯಾರ್ಥಿಗಳ ಬದಲಾಗಿ 50 ಜನ ವಿದ್ಯಾರ್ಥಿಗಳಿಗೆ ಒಂದು ತರಗತಿಯಂತೆ ಮಾಡಿದರೆ ಕಾರ್ಯಭಾರದ ಕೊರತೆಯಾಗದೆ ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಪೀಟರ್ ವಿನೋದ್ ಚೆಂದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ತೊಡೆಯ ಮೇಲೆ ಕೂಡಿಸಿಕೊಂಡು, ತುತ್ತು ಮಾಡಿ ಉಣಿಸುವೆ...

# ಒಂದು ನವಿರು ಪ್ರೇಮಕಥೆ

ಆತನೊಬ್ಬ ಭಗ್ನ ಪ್ರೇಮಿ. ಗೆಳತಿಯ ನೆನಪು ಹಂಚಿಕೊಳ್ಳುತ್ತಾ, ಅವಳು ಇಳಿವಯಸ್ಸಿನಲ್ಲಾದರೂ ಸಿಗಬಹುದು ಎನ್ನುವ ಆಶಯ ವ್ಯಕ್ತಪಡಿಸಿದ್ದ. ಆಗ ನಾನು ಆ ವಯಸ್ಸಿನಲ್ಲಿ ಏನು ಮಾಡ್ತಿಯಾ? ಎಂದಾಗ ಆ ಗೆಳೆಯ ಕಂಪಿಸುವ ಧ್ವನಿಯಲ್ಲಿ ಹೇಳಿದ 'ತೊಡೆಯ ಮೇಲೆ ಕೂಡಿಸಿಕೊಂಡು, ತುತ್ತು ಮಾಡಿ ಉಣಿಸುವೆ...' ಎಂಬ ಮಾತು ನನ್ನ ಮನದಲ್ಲಿ ಅಚ್ಚಾಯಿತು.

ಹಾಗೆ ಆಶಯ ಹೊಂದಿದ ಗೆಳೆಯ ಚಂದ್ರಶೇಖರ ನಮ್ಮೊಂದಿಗೆ ಇರಲಾಗದೆ ಅಪಘಾತದಲ್ಲಿ ಹೋಗಿ ಬಿಟ್ಟ. ಎಷ್ಟೋ ವರ್ಷಗಳ ನಂತರ ರೈಲಿನ ಗದಗ ಪ್ರಯಾಣದಲ್ಲಿ ಆತನ ಮಾತು ನೆನಪಾಯಿತು. ಅದುವೇ ಈ ಕಥೆಯಾಯಿತು.


"ತೋಡೆಯ ಮೇಲೆ ಕೂಡಿಸಿಕೊಂಡು, ತುತ್ತು ಮಾಡಿ ಉಣಿಸುವೆ.."

ಹೂ ಅರಳುವಂತೆ ಸಹಜವಾಗಿ ಪ್ರೇಮಿಗಳಿಬ್ಬರಲ್ಲೂ ಪ್ರೀತಿ ಹುಟ್ಟಿತು. ಹಾಗೇ ಬಹುತೇಕರ ಪ್ರೀತಿಯಂತೆ ಇವನ ಪ್ರೀತಿಯೂ ಪಕ್ವವಾಗುವ ಮುನ್ನವೇ, ಅವರಿವರ ನಾಲಿಗೆಯ ಮೇಲೆ ಹರಿದಾಡಿ, ರೆಕ್ಕೆ-ಪುಕ್ಕ, ಬಣ್ಣ-ಗಿಣ್ಣ ಮೆತ್ತಿಕೊಂಡು ಪ್ರೀತಿಯೇ ಗರ್ಭಪಾತವಾಯಿತು. ಹಾಂ, ನಿವು ಅಂದುಕೊಂಡಂತೆ ಎಲ್ಲವೂ ಮುಗಿದಿಲ್ಲ, ಅವರಿಬ್ಬರ ಪ್ರೀತಿ ಸತ್ತು ಗುಜರಿ ಸೇರಿರಲಿಲ್ಲ. ಹೃದಯದ ಮ್ಯೂಸಿಯಂನಲ್ಲಿ ಲವಲವಿಕೆಯಿಂದ ಇತ್ತು.

ಪ್ರೇಮಿಗಳು ಜೀವಚಿತ. ಹಾಗಂತ ಒಂದಾಗಿಯೂ ಇಲ್ಲ. ಎಲ್ಲೋ ದೂರದಲ್ಲಿ ಇದ್ದವರಿಗೆ ಹೃದಯದಾಳದಲ್ಲಿಯ ಅಳಿದುಳಿದ ತಂತು ಬೇರುಗಳು ಮಿಸುಕಾಡಿದಾಗ ಏನೋ ಎಡವಟ್ಟಾಗಿದೆ ಎನಿಸಿ ಕಸಿವಿಸಿಗೊಂಡು ಗೆಳೆಯರ ಹತ್ತಿರ ಅಸಮಾಧಾನಕ್ಕೆ ಆ ಉಗುರು ಬೆಚ್ಚಗಿನ ದಿನಗಳ ಮೆಲುಕು ಹಾಕುವುದು ಇದ್ದೇ ಇತ್ತು ಇಬ್ಬರಲ್ಲೂ. ಎರಡು ಜೀವಗಳ ಪರಸ್ಪರ ಭೇಟಿ ಸಮಯ ಬರಲು ದಶಕವೇ ಖಳನಾಯಕ.

ಪರಸ್ಪರ ನಗು, ಪ್ರೀತಿ ಬಾಲ್ಯದಲ್ಲಿ ಬಾಡಿತ್ತು. ಆ ಅಪಕ್ವತೆಯ ಪ್ರೀತಿಗೆ ಪಕ್ವತೆ ಬಂದಿದೆ, ಬಾಲ್ಯದ ದೇಹ ಸಿರಿ ಇಲ್ಲ. ಎಲ್ಲಾ ಪಕ್ವಮಯ, ಮಾಗಿ ಹಣ್ಣುಹಣ್ಣಾದ ಇಬ್ಬರೂ ಹಳೆಯ ಬೆಂಚ್ ಮೇಲೆ ಕುಳಿತು ಮೌನದಲ್ಲೇ ಮಾತು, ಪರಸ್ಪರ ಕುತೂಹಲದಿಂದ ಒಬ್ಬರನ್ನ ನೋಡಿ ಸಂತಸಗೊಂಡು ಪುಳಕಿತರಾದರು.

ಆಹ್ವಾನ ಪತ್ರಿಕೆ ಅವಳ ಕೈಯಲ್ಲಿ ಇಟ್ಟು, ಮೆಲು ಧ್ವನಿಯಲ್ಲಿ, 'ನಾಳೆ ಕಾರ್ಯಕ್ರಮ ಬಾ'. ಮೆಲ್ಲಗೆ ಹೊರಟ, ಅವಳು ಅವಸರವಾಗಿ ಆಹ್ವಾನ ಪತ್ರಿಕೆ ತೆಗೆದು, ಅಷ್ಟೇ ವೇಗವಾಗಿ ದಡಬಡಿಸಿ ಚಾಳಿಸ್




ಹಾಕಿಕೊಂಡು ಓದಿದಳು. ಆ ಹಣ್ಣಾದ ಕೆನ್ನೆಯಲ್ಲೂ ಅದೇನೋ ಹೊಸ ಹೊಳಪು. ಆ ಆಹ್ವಾನ ಪತ್ರಿಕೆಯಲ್ಲಿ ಆಕೆಯ ಹೆಸರಿನಲ್ಲಿ ಪ್ರತಿವರ್ಷ ಬಡ ವಿದ್ಯಾರ್ಥಿಗಳಿಗೆ ಧನಸಹಾಯ ನೀಡುವ ಕಾರ್ಯಕ್ರಮವೆಂದಿತ್ತು.

ಅವಳು ಅತನ ಹಿಂದೆಯೇ ಲಘುವಾಗಿ ಓಡಿ ಬಂದು 'ಏನ್ರಿ ಇದೆಲ್ಲಾ.....' ಸ್ವಲ್ಪ ನಿಧಾನವಾಗಿ ನೆಲ ನೋಡಿಕೊಂಡೆ, 'ನೋಡು ಮದುವೆ ಆಗಿದ್ದರೆ ಒಬ್ಬ ಒಳ್ಳೆಯ ಸಂಸಾರಿಯಾಗುತ್ತಿದ್ದೆ ಅಷ್ಟೆ. ನೋಡು ಇವತ್ತು ನಿನ್ನ ನೆನಪಿನ ತಪಸ್ಸಲ್ಲಿ ಬರೆದ ಕಾವ್ಯ, ಕಥೆ, ಕಾದಂಬರಿ ಮತ್ತು ಸಿನಿಮಾ ಹಾಡು ಇಷ್ಟೆಲ್ಲಾ ಸಂಪಾದಿಸಿದ್ದು, ನಿತ್ಯ ಧ್ಯಾನದಲ್ಲಿ...ಈ ಅಪಾರ ಹಣಕ್ಕೆ ನೀನೇ ಕಾರಣ. ಅದೆಲ್ಲಾ ನಿಂದೇ. ಹಾಗಾಗಿ ಈ ಕಾರ್ಯಕ್ರಮ, ನಾಳೆ ನೀ ಬಂದು ಈ ವರ್ಷದ ಬಡ ಪ್ರತಿಭಾವಂತರಿಗೆ ನಿನ್ನ ಕೈಯಾರೆ ಧನಸಹಾಯ ಮಾಡು...' ಎಂದು ಕಂಪಿಸುವ ಧ್ವನಿಯಲ್ಲಿ ಆಹ್ವಾನಿಸಿದ.

ಮರುದಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವಳು ಮಾತನಾಡುತ್ತಾ ಖುಷಿಯಿಂದ, 'ನೋಡ್ರಿ ಅವತ್ತು ನನಗೆ ಸೌಂದರ್ಯವಿತ್ತು, ಪ್ರೀತಿ ಅರ್ಥ ಮಾಡಿಕೊಳ್ಳಲು ಆಗಲಿಲ್ಲ. ಕೆಲವರು ಬಿಡಲಿಲ್ಲ. ಈಗ ಪ್ರೀತಿ ದೇಹವನ್ನೆಲ್ಲಾ ಆವರಿಸಿದೆ. ಆದರೆ ದೇಹ ಸಿರಿಯೇ ಉಳಿದಿಲ್ಲ...' ಸಮಾಧಾನದಿಂದ ಸಣ್ಣ ಧ್ವನಿಯಲ್ಲಿ ಹೇಳಿದಾಕ್ಷಣ ಇಡೀ ಸಭೆ ಮೌನಕ್ಕೆ ಶರಣಾಯಿತು.

ಕ್ಷಣ ಸಭಿಕರನ್ನು ದಿಟ್ಟಿಸಿ ನೋಡಿದ ಅವಳು, 'ನನ್ನ ಜೀವನ ಅಷ್ಟು ವರ್ಷಗಳನ್ನ ಒಂದೇ ದಿನದಂತೆ ನಾನೇ ಕಳೆದುಕೊಂಡೆ, ಬಂಧುಗಳ ವಾಕರಿಕೆಯಲ್ಲಿ, ನನಗೆ ನಾನು ಅರ್ಥವಾಗಿದ್ದು ಇವತ್ತು. ಅದು ಈ ಸಮಾರಂಭದಲ್ಲಿ ...' ಎಂದು ಅವನ ಕಡೆ ನೋಡುತ್ತಾ, 'ನಾ ಇವತ್ತು ಇವರಿಗೆ ಒಚಿದು ಉಡುಗೊರೆ ತಂದಿರುವೆ' ಎಂದು ಸುಂದರವಾದ ಊರುಗೋಲು ನೀಡಿದಳು.

ಉಡುಗೊರೆ ಕೈಯಲ್ಲಿ ಹಿಡಿದು ನಸುನಕ್ಕು, ಈ ಭಾವನೆ ಇಲ್ಲದ ವಸ್ತು ಬೇಡ ನನಗೆ, ನೀನೇ ಉರುಗೋಲಾಗಿ ನನ್ನೊಂದಿಗೆ ಬಾ! ಎಂದ ಆಶಯ ಕಂಗಳಿಂದ. ಆಕೆ ನಸು ನಕ್ಕು ಸಮ್ಮತಿಸಿದಳು. ಸಭೆಯಲ್ಲಿ ಸಭಿಕನೊಬ್ಬ, 'ಸರ್ ಈ ವಯಸ್ಸಿನಲ್ಲಿ ತೊಗೊಂಡು ಏನ್ ಮಾಡ್ತಿರಾ?' ಈತ ಅಷ್ಟೇ ಜೋರಾಗಿ 'ತೊಡೆಯ ಮೇಲೆ ಕೂಡಿಸಿಕೊಂಡು ತುತ್ತು ಮಾಡಿ ಉಣಿಸುವೆ' ಎಂದ. ಸಭೆಗೆ ಸಭೆಯೇ ಗೊಳ್ಳೆಂದು ನಗುತ್ತದೆ.



ಕಾರ್ಯಕ್ರಮದಿಂದ ಆಚೆ ಬಂದ ಹುಡಗ-ಹುಡುಗಿಯರು ಚಾಟ್ಸ್ ಅಂಗಡಿಗಳ ಕಡೆ ಮುಖಮಾಡದೆ, ಮನೆಗೆ ತೆರಳಿ ತಮ್ಮ ತಲೆಯ ಮೇಲೆ ಕೈಯಾಡಿಸುತ್ತಾ ಆ ಹಣ್ಣುಹಣ್ಣಾದ ಪ್ರೇಮಿಗಳ ತಾಜಾ ಪ್ರೀತಿ ಪ್ರೇಮ ಪ್ರಣಯಗಳ ಮೆಲುಕುಗಳೇ ಚಾಟ್ಸ್ ...

– ವಿಜಯ ಅಮೃತರಾಜ್, ಕೊಪ್ಪಳ.

# ಗದಗ ಉತ್ಸವ-2024ರಲ್ಲಿ ಜಿಲ್ಲೆಯ ಶ್ರೇಷ್ಠ ವರ್ತಕ ಹಾಗೂ ಶ್ರೇಷ್ಠ ಉದ್ಯಮಿ ಪ್ರಶಸ್ತಿ ಪುರಸ್ಕೃತರು.

**ಅಮೀನಸಾಬ ಅಬ್ದುಲಸುಭಾನಸಾಬ ಬಿಸನಹಳ್ಳಿ(ಮುಂಡರಗಿ):**



ರೈತಾಪಿ ಕುಟುಂಬದ ಬಿಸನಹಳ್ಳಿ ಮನೆತನದವರಾದ ಅಮೀನಸಾಬ ಅಬ್ದುಲಸುಭಾನಸಾಬ ಬಿಸನಹಳ್ಳಿ, ವ್ಯಾಪಾರ ಮತ್ತು ವ್ಯವಹಾರದ ಜೊತೆಗೆ ತಮ್ಮನ್ನು ತಾವು ಸಾಮಾಜಿಕವಾಗಿ ತೊಡಗಿಸಿಕೊಂಡರು. ಇವರು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಜೀವ ಸದಸ್ಯರಾಗಿ, ಸರ್ಕಾರಿ ಪದವಿಪೂರ್ವ ಕಾಲೇಜ ಸದಸ್ಯರಾಗಿ, ಎ.ಪಿ.ಎಂ.ಸಿ ಸಂಘದ ಕೋಶಾಧ್ಯಕ್ಷರಾಗಿ, ಕಾರ್ಯದರ್ಶಿಗಳಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. 2017ರಲ್ಲಿ 'ಕಾಯಕಯೋಗಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಸಾಧನೆ ಹಾಗೂ ಸಮಾಜದ ಎಲ್ಲಾ ವರ್ಗದ ಜೊತೆ ಒಳ್ಳೆಯ ಸ್ನೇಹ ಸಂಬಂಧವನ್ನು ಗುರುತಿಸಿ ಇವರಿಗೆ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ 2024ನೇ ಸಾಲಿಗೆ 'ಶ್ರೇಷ್ಠ ವರ್ತಕ' ಪ್ರಶಸ್ತಿಯನ್ನು ನೀಡಿ ಗೌರವಿಲಾಯಿತು.

**ಸಂಗನಗೌಡ ಜಿ.ಪಾಟೀಲ(ರೋಣ):** ಇವರು ಇವರು ಬಿ.ಇ



ಸಿವಿಲ್ ಪದವೀಧರರಾಗಿದ್ದು, ಯೂಥ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ, ರೋಣ ಮುನ್ಸಿಪಲ್ ಉಪಾಧ್ಯಕ್ಷರಾಗಿ, ರಾಜೀವ ಗಾಂಧಿ ಕಾಲೇಜಿನ ಚೇರಮನ್‌ರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. 2017-2018ನೇ ಸಾಲಿನಲ್ಲಿ ವೈಷ್ಣವೀ ಅಗ್ರೇಗೇಟ್ಸ್ ಉದ್ಯಮವನ್ನು ಪ್ರಾರಂಭಿಸಿದರು.



**ಗೋವಿಂದ ಮುತ್ತಣ್ಣ ಗುಡಿಸಾಗರ:** ಇವರು 2006ರಲ್ಲಿ ಗದಗ ನಗರದಲ್ಲಿ ಶ್ರೀ ವಾಸವಿ ಟ್ರೇಡಿಂಗ ಕಂಪನಿಯೊಂದಿಗೆ ಗದಗ ನಗರದ ವ್ಯಾಪಾರ ಕ್ಷೇತ್ರಕ್ಕೆ ಕಾಲಿಟ್ಟರು. ಮುಂದೆ 2008ರಲ್ಲಿ ಶ್ರೀನಿವಾಸ ಟ್ರೇಡರ್ಸ ನಾಮೇಯನ್ನು ಹುಟ್ಟು ಹಾಕಿದರು. 2023ರಲ್ಲಿ ಎಂ.ಆರ್.ಎಸ್. ಫುಡ್ಸ್ ಪ್ರಾರಂಭಿಸಿದರು. ನೂತನವಾಗಿ ವಾಸವಿ ಇಂಡಸ್ಟ್ರೀಜ್ ನಾಮೇಯನ್ನು ಶೀಘ್ರದಲ್ಲಿ ಪ್ರಾರಂಭಿಸಲಿದ್ದಾರೆ. ಇವರು ಉದ್ಯಮ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಯನ್ನು ಪರಿಗಣಿಸಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ 2024ನೇ ಸಾಲಿಗೆ ಜಿಲ್ಲೆಯ ಶ್ರೇಷ್ಠ ಉದ್ಯಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



**ಸಲೀಮಸಾಬ ಮಕ್ತುಮಸಾಬ ಮೇಗಲಮನಿ:** ನರಗುಂದ ತಾಲೂಕಿನವರಾದ ಸಲೀಮಸಾಬ ಮಕ್ತುಮಸಾಬ ಮೇಗಲಮನಿ ಹೊಟೇಲ್ ಉದ್ಯಮದ ಕಡೆಗೆ ಆಸಕ್ತಿ ತೋರುತ್ತಾರೆ 1987ರಲ್ಲಿ ಪ್ರಪ್ರಥಮವಾಗಿ ಡೀಲಕ್ಸ ಹೊಟೇಲ್ ಪ್ರಾರಂಭಿಸಿದರು. ಮುಂದೆ 2006ರಲ್ಲಿ ಉದ್ಯಮವನ್ನು ವಿಸ್ತರಿಸುವುದರೊಂದಿಗೆ ಡೀಲಕ್ಸ ಲಾಡ್ಜ ನ್ನು ಹುಟ್ಟುಹಾಕಿದರು, 2012ರಲ್ಲಿ ನ್ಯೂ ಡೀಲಕ್ಸ ರೆಸಿಡೆನ್ಸಿ ಪ್ರಾರಂಭಿಸಿದರು. 2023ರಲ್ಲಿ ನರಗುಂದದಲ್ಲಿ ನೂತನವಾಗಿ ಮೇಗಲಮನಿ ಆಸ್ಪತ್ರೆಯನ್ನು ಪ್ರಾರಂಭಿಸಿದರು. ಹೀಗೆ ಹಂತ ಹಂತವಾಗಿ ಬೆಳವಣಿಗೆಯನ್ನು ಕಾಣುತ್ತಾ ಧಾರವಾಡದಲ್ಲಿ ಐ.ಎ.ಎಸ್, ಕೆ.ಎ.ಎಸ್. ಓದುವಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ಡೀಲಕ್ಸ ಪ್ಲಾಜಾ ಎಂಬ ವಸತಿ ನಿಲಯವನ್ನು ಹುಟ್ಟುಹಾಕಿದರು. ನರಗುಂದ ನಗರದಲ್ಲಿ ಮೆ: ನರಗುಂದ ಸಿಮೆಂಟ ನಾಮೇಯಲ್ಲಿ ಸಿಮೆಂಟ ವ್ಯಾಪಾರವನ್ನು ಹೊಂದಿರುತ್ತಾರೆ. ಇದರ ಜೊತೆಗೆ ಕೃಷಿಯಲ್ಲಿ ಕೂಡಾ ಆಸಕ್ತಿಯನ್ನು ಹೊಂದಿದವರಾಗಿದ್ದಾರೆ.




**ಮಹಾದೇವಪ್ಪ ಮಲ್ಲಪ್ಪ ರಗಟಿ:** ಮೂಲತಃ ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ದೊಡ್ಡೂರ ಗ್ರಾಮದ ಪ್ರತಿಷ್ಠಿತ ರಗಟಿ ಮನೆತನದ 13/08/2081ರಲ್ಲ ಪ್ರಪ್ರಥಮವಾಗಿ ಕೃಷಿಯೊಂದಿಗೆ ವ್ಯಾಪಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮೆ: ಎನ್.ಬಿ. ರಗಟಿ & ಸನ್ಸ ನಾಮೇಯನ್ನು ಹುಟ್ಟುಹಾಕಿದರು. ಈ ನಾಮೇಯಲ್ಲಿ ದಲಾಲಿ ಅಂಗಡಿ ಪ್ರಾರಂಭಿಸಿದರು.. 2000ನೇ ಇಸ್ವಿಯಲ್ಲಿ ಎಂ.ಎಂ. ರಗಟಿ ನಾಮೇಯಲ್ಲಿ ಮತ್ತೊಂದು ದಲಾಲ ಅಂಗಡಿಯನ್ನು ಪ್ರಾರಂಭಿಸಿದರು. ಹೀಗೆ ವ್ಯಾಪಾರವನ್ನು ವಿಸ್ತರಿಸುವುದರೊಂದಿಗೆ ಇಡೀ ಗದಗ ಜಿಲ್ಲೆಗೆ ಚಿರಪರಿಚತರಾದ ವ್ಯಕ್ತಿತ್ವವನ್ನು ಹೊಂದಿರುತ್ತಾರೆ. ಸಾಮಾಜಿಕವಾಗಿ ಪಿ.ಎಲ್.ಡಿ. ಬ್ಯಾಂಕ ನಿರ್ದೇಶಕರಾಗಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಜೀವ ಸದಸ್ಯರಾಗಿ, ಧಾರ್ಮಿಕವಾಗಿ ಅನೇಕ ದೇವಸ್ಥಾನಗಳಿಗೆ ತಮ್ಮದೇ ಆದ ಅನುಪಮವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರ ಸಾಧನೆಯನ್ನು ಗುರುತಿಸಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ 2024ನೇ ಸಾಲಿಗೆ ಜಿಲ್ಲೆಯ ಶ್ರೇಷ್ಠ ವರ್ತಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.



**ಬಲವಂತ ವೆಂಕಟೇಶ ಪಾಟೀಲ:** ಇವರ ವ್ಯಾಪಾರದಲ್ಲಿ ಸಾಧಿಸಿದ ಸಾಧನೆಯನ್ನು ಗುರುತಿಸಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ 2024ನೇ ಸಾಲಿಗೆ ಜಿಲ್ಲೆಯ ಶ್ರೇಷ್ಠ ವರ್ತಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

**ಶರಣಬಸಪ್ಪ ಕೆ. ಕುರಡಗಿ:** (ಜೀವಮಾನ



ಸಾಧನೆ ಪ್ರಶಸ್ತಿ ಪುರಷ್ಕೃತರು) ಗದಗ ಜಿಲ್ಲೆಯ ರೋಣ ತಾಲೂಕಿನ ಕುರಡಗಿ ಗ್ರಾಮದ ಪ್ರತಿಷ್ಠಿತ ಕುರಡಗಿ ಮನೆತದಲ್ಲಿ 1955ರಲ್ಲಿ ಜನಿಸಿದ ಶ್ರೀ ಶರಣಬಸಪ್ಪ ಕಳಕಪ್ಪ ಕುರಡಗಿ ಮೆ: ಕೆ.ಎಂ. ಕುರಡಗಿ, ದಲಾಲಿ ಅಂಗಡಿಯ ವ್ಯವಹಾರದಲ್ಲಿ ತಂದೆಯವರೊಂದಿಗೆ ತೊಡಗಿಸಿಕೊಂಡು ವ್ಯಾಪಾರವನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸುವ ಮೂಲಕ ಸಾಮಾಜಿಕವಾಗಿಯೂ ಕೂಡಾ ಗುರುತಿಸಿಕೊಂಡಿದ್ದಾರೆ. ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಆಜೀವ ಸದಸ್ಯರಾಗಿ, ಕೋಶಾಧ್ಯಕ್ಷರಾಗಿ, ಸಹ ಗೌರವ ಕಾರ್ಯದರ್ಶಿ ಹಾಗೂ ಗೌರವ ಕಾರ್ಯದರ್ಶಿಗಳಾಗಿ ಉಪಾಧ್ಯಕ್ಷರಾಗಿ ಹಾಗೂ 2019-20ನೇ ಸಾಲಿಗೆ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.



**ಮಲ್ಲಿಕಾರ್ಜುನ ಬಿ. ಸುರಕೋಡ** (ಜೀವಮಾನ ಸಾಧನೆ ಪ್ರಶಸ್ತಿ ಪುರಷ್ಕೃತರು): 1963ರಲ್ಲಿ ಅಣ್ಣಿಗೇರಿಯಲ್ಲಿ ಜನಿಸಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅಣ್ಣಿಗೇರಿಯಲ್ಲಿ ಪೂರೈಸಿ ನಂತರ ಮಾಧ್ಯಮಿಕ ಶಿಕ್ಷಣವನ್ನು ಹುಬ್ಬಳ್ಳಿ ಜೆ.ಜಿ. ಕಾಲೇಜ ಆಫ್ ಕಾಮರ್ಸದಲ್ಲಿ ಬಿ.ಕಾಂ ಪದವಿಯನ್ನು ಪೂರೈಸಿದರು.

ನಂತರ ತಮ್ಮ ತಂದೆಯವರ ವ್ಯವಹಾರವಾದ ಕಾಟನ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವ್ಯಾಪಾರವನ್ನು ಮತ್ತಷ್ಟು ವಿಸ್ತರಿಸುವುದರೊಂದಿಗೆ, ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ 1992ರಲ್ಲಿ ಮೆ:ಸುರಕೋಡ ಆ್ಯಂಡ ಕಂ ನಾಮೇಯಲ್ಲಿ ದಲಾಲಿ ಅಂಗಡಿಯನ್ನು ಪ್ರಾರಂಭಿಸಿದರು. ಇನ್ನು ಹತ್ತು ಹಲವಾರು ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

# ಸ್ವಯಂ ಸೇವಾ ಸಂಸ್ಥೆಗಳ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಎ.ಪಿ.ಡಿ ಸಂಸ್ಥೆಯ ಸಂಸ್ಥಾಪಕರಾದ ಎನ್. ಎಸ್. ಹೇಮಾ ಇವರ ಸ್ಮರಣಾರ್ಥವಾಗಿ ಎ.ಪಿ.ಡಿ ಸಂಸ್ಥೆಯು ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಸ್ವಯಂ ಸೇವಾ ಸಂಸ್ಥೆಗಳಿಗೆ ಎನ್.ಎಸ್. ಹೇಮಾ ಸ್ಮಾರಕ ಪ್ರಶಸ್ತಿಯನ್ನು ನೀಡುತ್ತಿದೆ.

'ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬೆಲಿಟಿ' ಸಂಸ್ಥೆಯ ವತಿಯಿಂದ ಈ ಕಾರ್ಯಕ್ರಮವನ್ನು ಅಕ್ಟೋಬರ್ 4ರಂದು ಆಯೋಜಿಸಲಾಗುತ್ತಿದ್ದು, ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಂಸ್ಥೆಗಳಿಂದ ಪ್ರಸ್ತಾವನೆಯನ್ನು ಸ್ವೀಕರಿಸಿ ಉತ್ತಮ 3 ಸಂಸ್ಥೆಗಳಿಗೆ ಬಹುಮಾನ ನೀಡಲಾಗುತ್ತಿದೆ. ಪ್ರಥಮ ಬಹುಮಾನ ರೂ. 1 ಲಕ್ಷ, ದ್ವಿತೀಯ ಬಹುಮಾನ ರೂ. 50 ಸಾವಿರ ಮತ್ತು ತೃತೀಯ ಬಹುಮಾನ ರೂ. 25 ಸಾವಿರ ನೀಡಲಾಗುವುದು.

ಗದಗ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರಶಸ್ತಿ ನೀಡಲು ದ್ವಿ-ಪ್ರತಿಯಲ್ಲಿ ಪ್ರಸ್ತಾವನೆಯನ್ನು ಗದಗ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಎ.ಪಿ.ಡಿ ಸಂಸ್ಥೆಯ ಜನಾರ್ಧನ ಎ.ಎಲ್-9449869438 ಅವರನ್ನು ಅಥವಾ ಅಂಗವಿಕಲರ ಕಲ್ಯಾಣ ಇಲಾಖೆಯ ಕಛೇರಿಯ ದೂರವಾಣಿ ಸಂಖ್ಯೆ-08372-220419ಗೆ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

# ಶೌಚಾಲಯ ನಿರ್ಮಾಣಕ್ಕೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಚ್ಛ ಭಾರತ್ ಮಿಷನ್ ಯೋಜನೆ 2.0 ಅಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕಾಗಿ ಮುಂಡರಗಿ ಪುರಸಭೆಗೆ ಒಟ್ಟು 75 ವೈಯಕ್ತಿಕ ಶೌಚಾಲಯ ಗುರಿಯನ್ನು ನಿಗದಿಪಡಿಸಲಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಗಳಿಗೆ ಹಾಗೂ ಇತರೆ ಬಡ ಜನರಿಗೆ, ವಿಕಲ ಚೇತನರಿಗೆ 75 ವೈಯಕ್ತಿಕ ಶೌಚಾಲಯದ ಗುರಿಯನ್ನು ನಿಗದಿಪಡಿಸಿದ್ದು, ಪರಿಶಿಷ್ಟ ಜಾತಿ-30, ಪರಿಶಿಷ್ಟ ಪಂಗಡದವರಿಗೆ-11, ಹಾಗೂ ಇತರೆ ಬಡಜನರಿಗೆ-20, ವಿಕಲ ಚೇತನರಿಗೆ-14 ವೈಯಕ್ತಿಕ ಶೌಚಾಲಯವನ್ನು ನಿಗದಿಪಡಿಸಲಾಗಿದೆ.

ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿ ವೈಯಕ್ತಿಕ ಶೌಚಾಲಯಗಳನ್ನು ಹೊಂದದೆ ಇರುವ ಹಾಗೂ ಈ ಹಿಂದೆ ವೈಯಕ್ತಿಕ ಶೌಚಾಲಯಕ್ಕೆ ಪುರಸಭೆಯಿಂದ ಯಾವುದೇ ಅನುದಾನ ಪಡೆಯದೆ ಇರುವ ಫಲಾನುಭವಿಗಳು ತಮ್ಮ ಸ್ವಂತ ಜಾಗದಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಲು ಸಹಾಯಧನಕ್ಕಾಗಿ ಅರ್ಜಿಗಳನ್ನು ಸಲ್ಲಿಸಬಹುದು.

ಆಸಕ್ತರು ಸೆಪ್ಟೆಂಬರ್ 4ರೊಳಗಾಗಿ ಕಛೇರಿಯ ವೇಳೆಯಲ್ಲಿ ಮುಂಡರಗಿ ಪುರಸಭೆ ಕಾರ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳನ್ನು ಕಚೇರಿಯ ನೋಟಿಸ್ ಬೋರ್ಡ್‌ನಲ್ಲಿ ಅಂಟಿಸಲಾಗಿದೆ.

ಅವಧಿ ಮೀರಿ ಬಂದಂ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸುವಂತೆ ಮುಂಡರಗಿ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕಾಶೀ ವಿಶ್ವನಾಥ ಜಾತ್ರೆಯಲ್ಲಿ 11 ಜೋಡಿ ಉಚಿತ ಸಾಮೂಹಿಕ ವಿವಾಹ

# ಛಲದಿಂದ ಬಾಳ್ವೆ ನಡೆಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ನವವಿವಾಹಿತ ದಂಪತಿಗಳು ಆದರ್ಶ ಜೀವನ ಸಾಗಿಸಲಿ, ಮಕ್ಕಳಿಗೆ ಒಳ್ಳೆಯ ಸಂಸ್ಕಾರ- ಸಂಸ್ಕೃತಿಯನ್ನು ನೀಡಿ ಧರ್ಮದ ಹಾದಿಯಲ್ಲಿ ಮುನ್ನಡೆಸಿ ಎಂದು ಗದಗ ವೀರೇಶ್ವರ ಪುಣ್ಯಾಶ್ರಮದ ಪೂಜ್ಯ ಕಲ್ಲಯ್ಯಜ್ಜನವರು ಹೇಳಿದರು.

ಅವರು ಗದುಗಿನ ಕಾಶೀ ವಿಶ್ವನಾಥ ನಗರದ ಶ್ರೀ ಕಾಶೀ ವಿಶ್ವನಾಥ ರಥೋತ್ಸವ ಹಾಗೂ ಜಗನ್ಮಾತೆ ಶ್ರೀ ದುರ್ಗಾದೇವಿಗೆ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಸರ್ವಧರ್ಮಗಳ 11 ಜೋಡಿಗಳ ಉಚಿತ ಸಾಮೂಹಿಕ ವಿವಾಹ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಜೀವನದಲ್ಲಿ ಸುಖ-ದುಃಖ, ಏರು-ಇಳಿತ ಬರುವದು ಸಹಜ. ಸಮಸ್ಯೆಗಳನ್ನು ಮೆಟ್ಟಿ ನಿಂತು ಛಲದಿಂದ ಬಾಳಿ ಸಾಧಿಸಿ ತೋರಿಸಬೇಕು. ಇದನ್ನು ನವವಿವಾಹಿತರು ಅರಿತುಕೊಳ್ಳಬೇಕು ಎಂದರಲ್ಲದೆ, ಬಾಸಿಂಗ ಬಲ, ಕಷ್ಟ ಬಂದರೂ ತಾಳ್ಮೆ ಬೇಕು ಎಂದು ಸೂಚಿಸುವ ತಾಳಿ, ಕುಂಕುಮ, ಕಾಲುಂಗರದ ಔಚಿತ್ಯದ ಹಿನ್ನೆಲೆ ವಿಶ್ಲೇಷಿಸಿದರು.



ಕಾಶೀ ವಿಶ್ವನಾಥ ನಗರದಲ್ಲಿ ಸರ್ವ ಜನಾಂಗದವರಿದ್ದಾರೆ. ಒಗ್ಗಟ್ಟಿನೊಂದಿಗೆ ಸಮಾಜಮುಖಿಯಾಗಿ ಕಾರ್ಯ ಮಾಡುತ್ತಾರೆ. ಪ್ರತಿ ವರ್ಷ ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಿ ಬಡಬಗ್ಗರಿಗೆ ಆಗುವ ಆರ್ಥಿಕ ಹೊರೆಯನ್ನು ನೀಗಿಸಿದ್ದಾರೆ. ಸಂಗೀತ, ಸಾಹಿತ್ಯ, ಸಾಂಸ್ಕೃತಿಕ ಕಾರ್ಯಚಟುವಟಿಕೆಗಳಿಂದ ಯುವ ಜನಾಂಗವನ್ನು ಸನ್ಮಾರ್ಗದೆಡೆ ಮುನ್ನಡೆಸುತ್ತಿರುವ ಕಾಶೀ ವಿಶ್ವನಾಥ ನಗರದ ಹಿರಿಯರ ಮಾರ್ಗದರ್ಶನ ಸಾರ್ಥಕತೆ ಪಡೆದಿದೆ ಎಂದರು.

ಕಾಶೀ ವಿಶ್ವನಾಥ ನಗರದ ಅಧ್ಯಕ್ಷ ದುಂಡಪ್ಪ ಆಸಂಗಿ ಮಾತನಾಡಿ, ಹಿರಿಯರ ಮಾರ್ಗದರ್ಶನದಲ್ಲಿ ಉತ್ಸಾಹಿ ಯುವಕರು ಜಾತ್ರೆ, ಸಾಮೂಹಿಕ ವಿವಾಹ, ಇತರ ಅಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಒಗ್ಗಟ್ಟು ಇದ್ದರೆ ಒಳ್ಳೆಯದನ್ನು ಮಾಡಲು ಸಾಧ್ಯ ಎಂದರು.

ಮುಖ್ಯ ಅತಿಥಿಗಳಾಗಿ ಪರಪ್ಪ ಉಮಚಗಿ, ದುಂಡಪ್ಪ ಆಸಂಗಿ, ಲಲಿತಾ ಅಸೂಟಿ, ಶಾಂತಪ್ಪ ಮುಳವಾಡ, ವಿರುಪಾಕ್ಷಪ್ಪ ರಾಮಗಿರಿ, ಚನ್ನವೀರಪ್ಪ ಮಳಗಿ, ಕಳಕನಗೌಡ ಕಡಬಲಕಟ್ಟಿ, ಗಂಗಾಧರ ಬಳಿಗೇರ, ದೇವಪ್ಪ ಮಳಗಿ, ಶೇಖಣ್ಣ ಮುಳವಾಡ, ರಮೇಶ ಅಣ್ಣಿಗೇರಿ, ಮಹಾಲಿಂಗಪ್ಪ ಬರಬರಿ, ಅಶೋಕ ಗಡಾದ ಮುಂತಾದವರಿದ್ದರು.

ನಗರಸಭೆಯ ಮಾಜಿ ಅಧ್ಯಕ್ಷ ಬಿ.ಬಿ. ಅಸೂಟಿ, ಜಾತ್ರಾ ಸಮಿತಿಯ ಕಾರ್ಯದರ್ಶಿ ಗಂಗಾಧರ ಬಳಿಗಾರ ಮಾತನಾಡಿದರು. ಅಧ್ಯಕ್ಷತೆಯನ್ನು ಜಾತ್ರಾ ಸಮಿತಿಯ ಅಧ್ಯಕ್ಷ ನಿಂಗಪ್ಪ ಹೈದ್ರಿ ವಹಿಸಿದ್ದರು. ಶಾಂತಪ್ಪ ಅಕ್ಕಿ ನಿರೂಪಿಸಿ ವಂದಿಸಿದರು.

ನಂತರ ಜರುಗಿದ ಮಹಾ ಅನ್ನಸಂತರ್ಪಣೆಗೆ ಪೂಜ್ಯ ಕಲ್ಲಯ್ಯಜ್ಜನವರು ಚಾಲನೆ ನೀಡಿದರು. ಸಂಜೆ ಕಾಶೀ ವಿಶ್ವನಾಥನ ಮಹಾರಥೋತ್ಸವವು ಸಕಲ ವಾದ್ಯ ವೈಭವಗಳೊಂದಿಗೆ ಜರುಗಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಿಜೆಪಿ ನಾಯಕ ವಿಜಯಕುಮಾರ ಗಡ್ಡಿ ಮಾತನಾಡಿ, ಕಾಶೀ ವಿಶ್ವನಾಥ ನಗರ ಆದರ್ಶತೆಗೆ ಹೆಸರಾಗಿದೆ. ಕಳೆದ 30 ವರ್ಷಗಳಿಂದ ಉಚಿತ ಸಾಮೂಹಿಕ ವಿವಾಹ, ಮಹಾ ಅನ್ನಸಂತರ್ಪಣೆಯನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಬಂದಿದ್ದಾರೆ ಎಂದರು.

## ಗದಗ ಪ್ರೀಮಿಯರ್ ಲೀಗ್- 2ನೇ ಆವೃತ್ತಿ ಪ್ರಾರಂಭ




■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಪ್ರೀಮಿಯರ್ ಲೀಗ್-2024(ಜಿ.ಪಿ.ಎಲ್) 2ನೇ ಆವೃತ್ತಿ ಲೆದರ ಬಾಲ್ ಕ್ರಿಕೆಟ್ ಮತ್ತೆ ಪ್ರಾರಂಭವಾಗಲಿದೆ. ಕಳೆದ ಬಾರಿ ಯಶಸ್ವಿಯಾಗಿ ನೆರವೇರಿದ ಟೂರ್ನಿಯ ಕುರಿತು ಗದಗ ಜನತೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಟೂರ್ನಿಯಲ್ಲಿ ಎಲ್ಲಾ ಕ್ರಿಕೆಟ್ ಕ್ರೀಡಾಪಟುಗಳಿಗೂ ಅವಕಾಶವನ್ನು ಕಲ್ಪಿಸಲಾಗಿದೆ. ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 11 ಕೊನೆಯ ದಿನವಾಗಿರುತ್ತದೆ ಎಂದು ಕಮಿಟಿಯ ಸದಸ್ಯರು ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ಹರಾಜು ಪ್ರಕ್ರಿಯೆ ನಡೆಯಲಿದೆ ಹಾಗೂ ಅಕ್ಟೋಬರ್‌ನಲ್ಲಿ ಈ ಕ್ರಿಕೆಟ್ ಟೂರ್ನಿಯು ಪ್ರಾರಂಭವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

## ದಲಿತರ ಸಮಸ್ಯೆಗಳನ್ನು ಪರಿಹರಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ದಲಿತರಿಗೆ ರುದ್ರಭೂಮಿ ಇಲ್ಲದ ಗ್ರಾಮದಲ್ಲಿ ರುದ್ರಭೂಮಿ/ಸ್ಮಶಾನ/ಮುಕ್ತಿಧಾಮಕ್ಕೆ ಜಾಗ ಒದಗಿಸುವ ಕುರಿತು ಹಾಗೂ ಸಭೆಗೆ ಲೀಡ್ ಬ್ಯಾಂಕ್ ಮ್ಯಾನೇಜರ್, ಗದಗ ಜಿಲ್ಲೆಯಾದ್ಯಂತ ಕಟಿಂಗ್ ಸಲೂನ್ ಅಂಗಡಿ ಮಾಲೀಕರನ್ನು ಕರೆದು ಜಾಗೃತಿ ಮೂಡಿಸಬೇಕೆಂದು ಗದಗ ಜಿಲ್ಲೆಯ ವಿವಿಧ ದಲಿತ ಸಂಘಟನೆಯ ಮುಖಂಡರು ಗದಗ ಜಿಲ್ಲಾಧಿಕಾರಿಗಳಿಗೆ ಮತ್ತು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಂದುಕೊರತೆ ಸಭೆಯಲ್ಲಿ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ ವಾದ) ಪ್ರಧಾನ ಸಂಚಾಲಕ ಬಾಲರಾಜ ಅರಬರ, ಗದಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕುಂದುಕೊರತೆ ಸಭೆಗಳನ್ನು ನಡೆಸುತ್ತಿದ್ದರೂ ಸಮಸ್ಯೆಗಳು ಬಗೆಹರಿದಿಲ್ಲ. ಅನೇಕ ಸಲ ನಮ್ಮ ದಲಿತ ಮುಖಂಡರು ಕುಂದು-ಕೊರತೆ ಸಭೆಯ ಗಮನಕ್ಕೆ ತಂದಿದಿದ್ದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ ಎಂದರು. ದಲಿತರು ಸಬ್ಸಿಡಿ ಸಾಲಕ್ಕೆ ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಸಿದರೂ ಬ್ಯಾಂಕ್ ಮ್ಯಾನೇಜರ್‌ಗಳು ಸಾಲವನ್ನು ನೀಡುವುದಿಲ್ಲ. ಬಡವರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡಬೇಕೆಂದು ವಿನಂತಿಸಿಕೊಂಡರು. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಎಸ್.ಎನ್. ಬಳ್ಳಾರಿ, ದಲಿತ ಸಂಘಟನೆ ಸಂಚಾಲಕ ನಾಗರಾಜ್ ಗೋಕಾವಿ, ಹನಮಂತ ಚಲವಾದಿ, ಎಚ್.ಡಿ. ಪೂಜಾರ, ಪ್ರಕಾಶ ಕಲೆಕ್ಕನವರು, ರಮೇಶ್ ಚಲವಾದಿ, ಸಂತೋಷ ಬಣಕಾರ, ಮರಿಯಪ್ಪ ನಡುಗೇರಿ, ಸಹದೇವಪ್ಪ ಡಂಬಳ, ಮರಿಯಪ್ಪ ಡಂಬಳ ಮುಂತಾದವರು ಉಪಸ್ಥಿತರಿದ್ದರು.

## ಅಮೃತ ಭೋಜನ ಪುಣ್ಯದ ಕೆಲಸ

■ ವಿಜಯಸಾಕ್ಷಿ ಸುದ್ದಿ, ನರೇಗಲ್

ಶ್ರಾವಣ ಮಾಸದ ಸಂದರ್ಭದಲ್ಲಿ ಮಕ್ಕಳಿಗೆ ಅಮೃತ ಭೋಜನ ಉಣಬಡಿಸುವುದು ಅತ್ಯಂತ ಪುಣ್ಯದ ಕೆಲಸ. ಇಂತಹ ಪುಣ್ಯದ ಕೆಲಸಕ್ಕೆ ಮನಸ್ಸು ಮಾಡಿರುವ ಕುಮಾರ ಮಾಲಗಿತ್ತಿಮಠ ಮತ್ತು ಪತ್ರಕರ್ತ ಮಲ್ಲಯ್ಯ ಗುಂಡಗೋಪುರಮಠ ಕುಟುಂಬದ ಸರ್ವ ಸದಸ್ಯರು ಪುಣ್ಯವಂತರು. ಭಗವಂತ ಅವರಿಗೆ ಆಯುರಾರೋಗ್ಯವನ್ನು ದಯಪಾಲಿಸಲಿ ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಹೇಳಿದರು.



ಪಟ್ಟಣದ ಕೆ.ಜಿ.ಎಸ್. ಶಾಲೆಯಲ್ಲಿ ಶನಿವಾರ ಮಕ್ಕಳಿಗೆ ಅಮೃತ ಭೋಜನವನ್ನು ಬಡಿಸಿದ ನಂತರ ಅವರು ಮಾತನಾಡಿದರು.

ಇಲ್ಲಿನ ಎಲ್ಲ ಸಿಬ್ಬಂದಿಯವರು ಪ್ರತಿ ವರ್ಷದ ಶ್ರಾವಣ ಮಾಸದಲ್ಲಿ ಇಂತಹ ಕಾರ್ಯಕ್ರಮವನ್ನು ಮಾಡುವ ಮೂಲಕ ಶಾಲಾ ಮಕ್ಕಳ ಮತ್ತು ಪಾಲಕರ ಪ್ರೀತಿಗೆ ಪಾತ್ರರಾಗಿದ್ದಾರೆ. ಅವರಿಗೆ ದಾನಿಗಳೂ ಸಕಲ ರೀತಿಯ ಸಹಕಾರವನ್ನು ನೀಡಿದ್ದಾರೆ. ಈ ಕಾರ್ಯವನ್ನು ಯಶಸ್ವಿಗೊಳಿಸುವಲ್ಲಿ ಮತ್ತು ಯೋಜನೆ ಮಾಡುವಲ್ಲಿ ಶ್ರಮಿಸಿದ ಶಾಲೆಯ ಮುಖ್ಯ ಶಿಕ್ಷಕರನ್ನು ಮತ್ತು ಸಿಬ್ಬಂದಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುವುದಾಗಿ ಕುಲಕರ್ಣಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ಬಿ.ಬಿ. ಕುರಿ ಮಾತನಾಡಿ, ಕಳೆದ ಕೆಲಸವು ವರ್ಷಗಳಿಂದ ಸಾಗಿ ಬಂದಿರುವ ಈ ಕಾರ್ಯಕ್ರಮಕ್ಕೆ ದಾನಿಗಳಿಂದ ದೊರೆತ ಪ್ರೋತ್ಸಾಹಕ್ಕೆ ನಾವೆಲ್ಲರೂ ಮೂಕರಾಗಿದ್ದೇವೆ. ಸಮುದಾಯದ ಸಹಕಾರ ಇದೇ ರೀತಿ ಇದ್ದರೆ ಮತ್ತಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಮಗೆ ಸ್ಫೂರ್ತಿ ಬರುತ್ತದೆ ಎಂದರು.

ಈ ಸಂದರ್ಭದಲ್ಲಿ ಪತ್ರಕರ್ತ ಮಲ್ಲಯ್ಯ ಗುಂಡಗೋಪುರಮಠ, ಎನ್.ಎಲ್. ಚವ್ಹಾಣ, ಎಂ.ಪಿ. ಅಣಗೌಡರ, ಡಿ.ವಿ. ಕಳ್ಳಿ, ಜೆ.ಎ. ಪಾಟೀಲ, ಎಂ.ಎಸ್. ಮಾಳಶೆಟ್ಟಿ, ಎಸ್.ಐ. ಜಗಾಪೂರ, ರಾಜೇಶ್ವರಿ ತೊಂಡಿಹಾಳ, ಎಚ್.ಎಫ್. ಕಡ್ಲಿಮಟ್ಟಿ, ಬಿ.ಡಿ. ಹಳ್ಳದಮನಿ ಸೇರಿದಂತೆ ಇತರರಿದ್ದರು.

## ಗದಗ ಉತ್ಸವದಲ್ಲಿ ಪ್ರಕಾಶ ಹಡಪದರಿಗೆ ವಿಶೇಷ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಗದಗ



ಪ್ರಕಾಶ ಸಿ.(ಚನ್ನಪ್ಪ) ಹಡಪದ ಇವರು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದ ಗ್ರಾಮದ ಸಾಮಾನ್ಯ ಕುಟುಂಬದಲ್ಲಿ ಜನಿಸಿದವರು. ಮುಂದೆ ಬೋರ್‌ವೆಲ್ ಬಿಡಿಭಾಗ ತಯಾರಿಸುವ ಕಂಪನಿಯನ್ನು ಹುಟ್ಟುಹಾಕುವ ಮೂಲಕ ಕರ್ನಾಟಕ, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಕಂಪನಿಗಳನ್ನು ಪ್ರಾರಂಭಿಸಿದರು.

ಇವರು ತಮ್ಮ ಉದ್ಯಮದಲ್ಲಿ ಸಾಕಷ್ಟು ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿದ್ದಾರೆ. ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯಿಂದ ಹಮ್ಮಿಕೊಂಡಿರುವ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಮಾರಾಟಗಳ 'ಗದಗ ಉತ್ಸವ-2024'ರ ಶ್ರೇಷ್ಠ ವರ್ತಕ ಹಾಗೂ ಶ್ರೇಷ್ಠ ಉದ್ಯಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಗುತ್ತಿದೆ.

## ರೈತರಿಗಾಗಿ ಸಂಪರ್ಕ ಕಾರ್ಯಾಗಾರ

■ ವಿಜಯಸಾಕ್ಷಿ ಸುದ್ದಿ, ಗದಗ

ರಿಲಾಯನ್ ಫೌಂಡೇಶನ್ ಹಾಗೂ ಔಟ್‌ರಿಚ್ ಸಂಘಟನೆಯ ಸಹಯೋಗದೊಂದಿಗೆ ಗದುಗಿನ ಕೃಷಿ ಸಂಶೋಧನಾ ಕೇಂದ್ರದಲ್ಲಿ ರೈತ ಸಮೂಹಕ್ಕಾಗಿ (ಎಫ್.ಪಿ.ಓ) ನೆಟ್‌ವರ್ಕ್ ಸಂಪರ್ಕ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.



ಅಸಮರ್ಪಕ ವ್ಯಾಪಾರ ಬಂಡವಾಳ ಮತ್ತು ಸ್ಟೋರೇಜ್ ಸೌಲಭ್ಯಗಳಂತಹ ತಮ್ಮ ಸವಾಲುಗಳ ಬಗ್ಗೆ ಎಫ್.ಪಿ.ಓ ಮಾಹಿತಿಯನ್ನು ಹಂಚಿಕೊಂಡರು. ಕೀರ್ತಿ ಸಮೂಹ ಸಂಸ್ಥೆಯ ಮುಖ್ಯಸ್ಥರಾದ ಪರಮೇಶ್ವರಿ ಗೌರೆ ಮಾತನಾಡಿ, ಎಫ್.ಪಿ.ಓಗಳು ಗುಣಮಟ್ಟದ ನಿಯತಾಂಕಗಳನ್ನು ಖಚಿತಪಡಿಸಿಕೊಳ್ಳಬೇಕು. ಗುಂಪಿನ ಫ್ರಾಂಚೈಸಿಯನ್ನು ತೆಗೆದುಕೊಳ್ಳಬಹುದು. ಸಮಂಜಸವಾದ ಬೆಲೆಯಲ್ಲಿ ಡ್ರೋನ್ ಪೂರೈಕೆ, ಗ್ರಾಹಕರ ನೇಮಕ ಕೇಂದ್ರದ ಸೇವೆಗಳನ್ನು ತೆಗೆದುಕೊಳ್ಳಬಹುದು. ಗದುಗಿನ ಕಾರ್ತಿಕ್ ಕೃಷಿ ಕೇಂದ್ರ ಆಹಾರ ಸಂಸ್ಕರಣಾ ಘಟಕಗಳಾದ ರೊಟ್ಟಿ ಯಂತ್ರ, ಮೆಣಸಿನಕಾಯಿ ಪುಡಿ ಮಾಡುವ ಯಂತ್ರವನ್ನು ಪೂರೈಸುತ್ತದೆ ಮತ್ತು ಅದನ್ನು ಎಫ್.ಪಿ.ಓ ಬ್ರಾಂಡ್‌ನಲ್ಲಿ ಮಾರಾಟ ಮಾಡುತ್ತದೆ. ರೈತರಿಗೆ ಸಹಾಯಧನ ಪಡೆಯಲು ಸಹಾಯ ಮಾಡಲಾಗುವದು ಎಂದರು.

ಆಕ್ಸಿಸ್ ಬ್ಯಾಂಕ್‌ನ ಎಫ್‌ಪಿಓಗಳ ನಿಧಿ ವಿಭಾಗದ ರಾಜೇಶ ಮಠದ ಮಾತನಾಡಿ, ಆಕ್ಸಿಸ್ ಬ್ಯಾಂಕ್ ಸಾಲಗಳು ಕೃಷಿ ಪ್ರಕ್ರಿಯೆಗಾಗಿ 10 ಲಕ್ಷದಿಂದ 2 ಕೋಟಿಯವರೆಗೆ ಲಭ್ಯವಿದೆ. ಯೋಜನೆಯ ಪ್ರಕಾರ ಯಾವುದೇ ಮೇಲಾಧಾರ ಭದ್ರತೆ ಅಗತ್ಯವಿಲ್ಲ. ವಾರ್ಷಿಕ ವಹಿವಾಟಿನ ಶೇ.20ಕ್ಕಿಂತ ಹೆಚ್ಚಿನ ಓವರ್‌ಡ್ರಾಫ್ಟ್ ಸಾಲ, ಕೃಷಿ ಮೂಲಸೌಕರ್ಯ ನಿಧಿಯಡಿ (6%) 20 ಕೋಟಿವರೆಗೆ ವೇರ್‌ಹೌಸ್ ನಿರ್ಮಾಣ, ಎಲ್ಲಾ ಕೃಷಿ ಮೂಲಸೌಕರ್ಯ ಸಾಲಕ್ಕಾಗಿ 5 ವರ್ಷಗಳ ಅವಧಿಯ ಸಾಲಗಳು ಲಭ್ಯ ಎಂದರು. ಗದಗ ಜಿಲ್ಲೆಯ ಸುಮಾರು 18 ರೈತ ಉತ್ಪಾದಕರ ಕಂಪನಿಗಳ ನಿರ್ದೇಶಕರು ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಸಾಮೂಹಿಕ ಪಾರಾಯಣ, ಭಜನೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪವಿತ್ರ ಶ್ರಾವಣ ಮಾಸದ ಕೊನೆಯ ಶನಿವಾರ ಪಟ್ಟಣದ ಸವಣೂರು ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವಾರಕರಿ ಹಾಗೂ ಬಾಂಧವರಿಂದ ಭಗವದ್ಗೀತಾ, ಶ್ರೀ ಜ್ಞಾನೇಶ್ವರೀ ಗ್ರಂಥ ಪಾರಾಯಣ, ನಾಮಜಪ, ಭಜನೆಗಳನ್ನು ನೆರವೇರಿಸಿದರು. ಹ.ಭ.ಪ ಸತೀಶ ಮಾಂಡ್ರೆಯವರ ನೇತೃತ್ವದಲ್ಲಿ ಪಾರಾಯಣ ನಾಮಜಪಯಜ್ಞ ಭಜನೆ ಸೇವೆ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ನಿವೃತ್ತಿ ತಾಂದಳೆ, ಸಂತೋಷ ಸರ್ವದೆ, ಜ್ಞಾನೋಬಾ ಬೋಮಲೆ, ಸಂಜೀವ, ಉದಯ, ಮಹಿಳಾ ಮಂಡಳಿಯ ರುಕುಮಾಬಾಯಿ ರಂಪೂರೆ ಸೇರಿದಂತೆ ಸಮಾಜದ ಮಹಿಳೆಯರು ಪಾಲ್ಗೊಂಡಿದ್ದರು. ರಮೇಶ ಬಾವಿಕಟ್ಟಿಯವರ ಇದ್ದರು.

## ನಿವೃತ್ತ ನೌಕರರಿಂದ ಸಿಎಂಗೆ ಮನವಿ



■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸರ್ಕಾರ 7ನೇ ವೇತನ ಆಯೋಗದ ಆದೇಶವನ್ನು ಪುನರ್ ಪರಿಶೀಲಿಸಿ, ಹೊಸ ಆದೇಶ ಹೊರಡಿಸಿ ನಿವೃತ್ತ ನೌಕರರ ಆರ್ಥಿಕ ಸೌಲಭ್ಯವನ್ನು ಕೂಡಲೇ ನೀಡಬೇಕು ಎಂದು ಕರ್ನಾಟಕ ನಿವೃತ್ತ ನೌಕರರ ವೇದಿಕೆಯ ತಾಲೂಕು ಘಟಕದಿಂದ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಶನಿವಾರ ಮನವಿ ನೀಡಿದರು.

01-07-2022ರಿಂದ 31-07-2024ರವರೆಗೆ ನಿವೃತ್ತರಾದ/ನಿಧನ ಹೊಂದಿದ ಅಧಿಕಾರಿ, ನೌಕರರಿಗೆ ಪರಿಷ್ಕೃತ ವೇತನದನ್ವಯ DCRG, COMMUTATION (OPTION) (5) EL ENCASHMENT ಲೆಕ್ಕಾಚಾರ ಮಾಡದೆ ಹಳೆಯ ವೇತನ ಶ್ರೇಣಿಯ ಮೇಲೆಯೇ ಪರಿಗಣಿಸಲಾಗುತ್ತಿದೆ. ಪರಿಣಾಮ ನಿವೃತ್ತಿ ಜೀವನ ಸಂಧ್ಯಾ ಕಾಲದಲ್ಲಿರುವ ನಮಗೆ ಅತೀವ ಆಘಾತವಾಗಿದೆ. ಪ್ರಸ್ತುತ ಸೇವೆಯಲ್ಲಿರುವ ಇತರ ಅಧಿಕಾರಿ/ನೌಕರರಂತೆ ನಾವು ಕೂಡ ದಿನಾಂಕ 01-07-2022ರಿಂದಲೇ ಪಡೆಯಬೇಕಿದ್ದ ನಿವೃತ್ತಿ ವೇತನದ ವ್ಯತ್ಯಾಸ ಬಾಕಿಯನ್ನು ಕೇಳುತ್ತಿಲ್ಲ. ಹೀಗಾಗಿ ನಮಗೆ ಆಗುತ್ತಿರುವ ಅರ್ಥಿಕ ನಷ್ಟವನ್ನು ಅರ್ಥ ಮಾಡಿಕೊಂಡು ಮೇಲಿನ ಅವಧಿಯಲ್ಲಿ ನಿವೃತ್ತರಾದ ನಮಗೂ ಪರಿಷ್ಕೃತ ಮೂಲ ವೇತನದ ಮೇಲೆ DCRG, COMMUTATION (OPTION) EL ENCASHMENT ಲೆಕ್ಕಾಚಾರ ಮಾಡಿ ನ್ಯಾಯೋಚಿತವಾಗಿ ಲಭ್ಯವಾಗುವ ಆರ್ಥಿಕ ಸೌಲಭ್ಯವನ್ನು ನೀಡಬೇಕು ಎಂದು ಮನವಿ ನೀಡಿದರು. ಈ ವೇಳೆ ವೀರಣ್ಣ ಅಡಗತಿ, ಎಸ್.ಎಸ್. ಕೊಪ್ಪರದ, ಕೆ.ಆಯ್. ಕರಣಿ, ಕೆ.ಜಿ. ಸಂಗಟಿ, ವಿ.ಎಸ್. ಕೋರಿ, ಎಂ.ಎಸ್. ತೋಟದ, ಎಚ್.ವಿ. ಮಲಜಿ, ಎಸ್.ಸಿ. ಬಾಗೂರ, ವಿ.ವಾಯ್. ಸುಣಗಾರ, ಎಸ್.ಆರ್. ಅಮರಗಟ್ಟಿ, ಎಸ್.ಬಿ. ಡೊಳ್ಳಿನ, ಐ.ಎಸ್. ಹಾಶಿಮನವರ, ಬಿ.ಬಿ. ಗುರಿಕಾರ, ಡಿ.ವಿ. ಕೆಂಬಾವಿ ಸೇರಿ ಇತರರು ಇದ್ದರು.

## ನಿಧನ ವಾರ್ತೆ

### ಪಾರವ್ವ ಪಾಟೀಲ



ಲಕ್ಷ್ಮೇಶ್ವರ: ತಾಲೂಕಿನ ಸಂಕದಾಳ ಗ್ರಾಮದ ಹಿರಿಯರಾದ ಪಾರವ್ವ ಕೋಂ ಶಂಕರಗೌಡ ಪಾಟೀಲ (73) ಶನಿವಾರ ಸಂಜೆ ನಿಧನರಾದರು.

ಮೃತರ ಅಂತ್ಯಕ್ರಿಯೆ ರವಿವಾರ ಮಧ್ಯಾಹ್ನ ಸಂಕದಾಳ ಗ್ರಾಮದಲ್ಲಿ ನೆರವೇರಲಿದೆ. ಮೃತರು, ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂದು-ಬಳಗವನ್ನು ಅಗಲಿದ್ದಾರೆ.

### ವಚನ ಕಂಠಪಾಠ ಸ್ಪರ್ಧೆ ಉದ್ಘಾಟಿಸಿದ ರತ್ನಕ್ಕ ಪಾಟೀಲ ಅಭಿಮತ

# ಶರಣ ಜೀವನ ರೂಪಿಸಿಕೊಳ್ಳಿ

■ ವಿಜಯಸಾಕ್ಷಿ ಸುದ್ದಿ, ಗದಗ

ಶಿವಶರಣರು ನುಡಿದಂತೆ ನಡೆದು ಆದರ್ಶ ಬದುಕನ್ನು ಸಾಗಿಸಿದವರು. ಅವರ ಆತ್ಮಾನುಭವ ವಾಣಿಗಳೇ ವಚನಗಳು, ಶರಣರು ತಮ್ಮ ಬದುಕಿನಲ್ಲಿ ಕಂಡುಕೊಂಡ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ, ಜಾತ್ಯಾತೀತ ಮೌಲ್ಯಗಳ ಆಚರಣೆಗಳನ್ನು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಪರಿಚಯಿಸಿದವರು. ಶರಣರು ತಿಳಿಸಿರುವ ವಚನಗಳನ್ನು ಇಂದು ನಾವು ಮಕ್ಕಳಿಗೆ ತಿಳಿಸಿ ಹೇಳಿದರೆ ಅವರೂ ಮಾನವೀಯ ಮೌಲ್ಯಗಳ ಉತ್ತಮ ಗುಣಾಂಶಗಳನ್ನು ರೂಢಿಸಿಕೊಂಡು ಸುಸಂಸ್ಕೃತರಾಗಿ ಬೆಳೆಯುತ್ತಾರೆ. ಮುಂದೊಂದು ದಿನ ಸುಂದರ ಸಮಾಜ ನಿರ್ಮಾಣಕ್ಕೆ ಸಹಾಯಕರಾಗುತ್ತಾರೆ. ಹೀಗಾಗಿ ಮಕ್ಕಳು ಸುಸಂಸ್ಕೃತರಾಗಿ ಬೆಳೆಯಲು ವಚನಗಳು ಸಹಕಾರಿಯಾಗಿವೆ ಎಂದು ಗದಗ ತಾಲೂಕ ಕದಳಿ ಮಹಿಳಾ ವೇದಿಕೆಯ ಗೌರವಾಧ್ಯಕ್ಷರಾದ ಶರಣೆ ರತ್ನಕ್ಕ ಪಾಟೀಲ ತಿಳಿಸಿದರು.

ಗದಗ ಜಿಲ್ಲಾ ಮತ್ತು ತಾಲೂಕಾ ಕದಳಿ ಮಹಿಳಾ ವೇದಿಕೆ ಶ್ರಾವಣ ಮಾಸದ ಪ್ರಯುಕ್ತ ಸಿದ್ಧಲಿಂಗ ನಗರದಲ್ಲಿನ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವಚನ ಕಂಠಪಾಠ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಮಕ್ಕಳು ಮೊಬೈಲ್‌ನಲ್ಲಿ ಗೇಮ್, ಡ್ಯಾನ್ಸ್ ಇನ್ನಿತರೆ ವಿಷಯಗಳನ್ನು ನೋಡುವ ಬದಲಾಗಿ ಶರಣರ ವಚನಗಳನ್ನು ಓದಿ, ಕೇಳಿ, ಹಾಡಿ ಮನನ ಮಾಡಿಕೊಂಡು ಶರಣ ಜೀವನ ರೂಪಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಸೂಚಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗದಗ ತಾಲೂಕಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಸುಲೋಚನಾ ಐಹೊಳ್ಳಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಮತ್ತು ಭೋಜನ ಮಾಡುವ ಮುನ್ನ ವಚನ ಹೇಳುವುದನ್ನು ರೂಢಿಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯ ಶಿಕ್ಷಕಿಯರಾದ ಎಸ್.ಆರ್. ಹನುಮಗೌಡ್ರ ಮಾತನಾಡಿ, ವಚನ ವಾಚನ ಮಾಡುವುದಕ್ಕಿಂತ ಸಂಗೀತಮಯವಾಗಿ ಹಾಡಿದರೆ ಹೆಚ್ಚಿನ ಪರಿಣಾಮ ದೊರೆಯುವುದು. ಕಾರಣ ವಿದ್ಯಾರ್ಥಿಗಳು ಸಂಗೀತ ಸಂಯೋಜನೆಯೊಂದಿಗೆ ವಚನ ಹಾಡುವದನ್ನು ಕಲಿತುಕೊಳ್ಳಬೇಕೆಂದು ಸೂಚಿಸಿದರು.

ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದ ಬಸವತತ್ವಾಭಿಮಾನಿಗಳಾದ ಎಸ್.ಎ. ಮುಗದ ಮತ್ತು ಗೌರಕ್ಕ ಬಡಿಗಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿ ವಿದ್ಯಾರ್ಥಿಗಳು ವಚನ ತತ್ವಾಚರಣೆಗಳ ಮಾರ್ಗದಲ್ಲಿ ನಡೆಯಬೇಕೆಂದು ಹೇಳಿದರು.

ಪ್ರಾರಂಭದಲ್ಲಿ ಆರತಿ ನಾಯ್ಕರ, ಅನುಪಮಾ ಮುಗಳಿ ಪ್ರಾರ್ಥನೆ ಹೇಳಿದರು. ಕದಳಿ ಮಹಿಳಾ ವೇದಿಕೆ ಉಪಾಧ್ಯಕ್ಷೆ ರೇಣುಕಾ ಕರೆಗೌಡ್ರ ಸ್ವಾಗತಿಸಿದರು. ಮಂಜುಳಾ ಅಕ್ಕಿ ಕಾರ್ಯಕ್ರಮ ನಿರೂಪಿಸಿದರು. ಮಂಗಳಾ ಕಾಮಣ್ಣವರ ವಂದಿಸಿದರು. ಮಂಜುಳಾ ಅಕ್ಕಿ ಕಾರ್ಯಕ್ರಮ ನಿರೂಪಿಸಿದರು.

ವಚನ ಕಂಠಪಾಠ ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಚನ ಹೇಳಿದ ವೀರಯ್ಯ ಹಿರೇಮಠ - ಪ್ರಥಮ, ಶಾಖಾಂಬರಿ ನರೇಗಲ್ಲ - ದ್ವಿತೀಯ, ಶ್ರೀದೇವಿ ಹಿರೇಮಠ - ತೃತೀಯ, ದಿವ್ಯಶ್ರೀ ಪಾಟೀಲ ಮತ್ತು ಭೂಮಿಕಾ ಬೇಂದ್ರೆ ಸಮಾಧಾನಕರ ಸ್ಥಾನ ಪಡೆದರು. ಭಾಗವಹಿಸಿದ ಸ್ಪರ್ಧಿಗಳೆಲ್ಲರಿಗೂ ವಚನ ಪುಸ್ತಕಗಳನ್ನು ಮತ್ತು ವಿಜೇತರಾದವರಿಗೆ ಸೂಕ್ತ ಬಹುಮಾನಗಳನ್ನು ವೇದಿಕೆಯಲ್ಲಿನ ಗಣ್ಯರು ವಿತರಿಸಿದರು.

# ಜಕ್ಕಲಿ ವೀರಭದ್ರೇಶ್ವರ ಜಾತ್ರೆ ನಾಳೆ



■ವಿಜಯಸಾಕ್ಷಿ ಸುದ್ದಿ, ನರೇಗಲ್

ಸಮೀಪದ ಜಕ್ಕಲಿ ಗ್ರಾಮದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಲಘು ರಥೋತ್ಸವ ಸೆ. 02ರಂದು ಜರುಗಲಿದೆ.

ಜಾತ್ರೆಯ ಅಂಗವಾಗಿ ಅಂದು ಬೆಳಿಗ್ಗೆ 6ಕ್ಕೆ ವೀರಭದ್ರೇಶ್ವರ ದೇವರಿಗೆ ಮಹಾ ರುದ್ರಾಭಿಷೇಕ ಜರುಗುವುದು.

ಮಧ್ಯಾಹ್ನ 2ಕ್ಕೆ ಅನ್ನದಾಸೋಹ ನಡೆಯಲಿದೆ. ಸಂಜೆ 5-30ಕ್ಕೆ ನರೇಗಲ್ಲ-ಕೋಡಿಕೊಪ್ಪದ ಪುರವಂತರು ಒಡುಪಗಳನ್ನು ಪ್ರದರ್ಶನ ಮಾಡುತ್ತಾ ಉತ್ಸವ ಸಾಗಿ, ಕರಡಿ ಮಜಲು, ಡೊಳ್ಳು ಸಕಲ ವಾದ್ಯ ವೈಭವದೊಂದಿಗೆ ದೇವಸ್ಥಾನದಿಂದ ಗ್ರಾಮದ ಪ್ರಮುಖ ಬೀದಿಗಳಾದ ಗ್ರಾಮ ಚಾವಡಿ ಸರ್ಕಲ್, ಹನುಮಂತ ದೇವರ ಗುಡಿ, ಸಂಗಮೇಶ್ವರ ದೇವಸ್ಥಾನದ ಮೂಲಕ ಕಲ್ಮೇಶ್ವರ ದೇವಸ್ಥಾನದವರೆಗೆ ವಿಜೃಂಭಣೆಯಿಂದ ನಡೆಯಲಿದೆ ಎಂದು ದೇವಸ್ಥಾನ ಜಾತ್ರಾ ಮಹೋತ್ಸವ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

### ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ದರಾಮ ಶ್ರೀಗಳು

# ಪುಸ್ತಕ ಸಂಸ್ಕೃತಿ ಬೆಳೆಯಬೇಕು

■ವಿಜಯಸಾಕ್ಷಿ ಸುದ್ದಿ, ಗದಗ

ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಪುಸ್ತಕದ ಬಗ್ಗೆ ಬಹಳಷ್ಟು ಪ್ರೀತಿ ಮತ್ತು ಅಭಿಮಾನ ಇದ್ದ ಕಾರಣ ಪುಸ್ತಕದ ಸ್ವಾಮೀಜಿ, ಕನ್ನಡದ ಸ್ವಾಮೀಜಿ ಎಂದೇ ಪ್ರಸಿದ್ಧರಾಗಿದ್ದರು. ಅವರು 650ಕ್ಕಿಂತಲೂ ಹೆಚ್ಚಿನ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪುಸ್ತಕ ಸಂಸ್ಕೃತಿ ಬೆಳೆಯಬೇಕು, ಓದದುವವರ ಸಂಖ್ಯೆ ಹೆಚ್ಚಾಗಬೇಕು ಎಂದು ಡಾ. ತೋಂಟದ ಸಿದ್ದರಾಮ ಶ್ರೀಗಳು ನುಡಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2708ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ನಮ್ಮ ಗುರುಗಳಾದ ಲಿಂಗೈಕ್ಯ ಡಾ. ತೊಂಟದ ಸಿದ್ದಲಿಂಗ ಮಹಾಸ್ವಾಮಿಗಳು ಅನ್ನ ದಾಸೋಹ, ಜ್ಞಾನ ದಾಸೋಹ, ಪುಸ್ತಕ ದಾಸೋಹದ ಜೊತೆ-ಗೆ ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ನಾಡು-ನುಡಿಗೆ ಅವರು ಸಲ್ಲಿಸಿದ ಸೇವೆ ಅನನ್ಯ ಮತ್ತು ಅನುಪಮವಾದುದು. ಒಂದು ವಿಶ್ವವಿದ್ಯಾಲಯಕ್ಕಿಂತಲೂ ಹೆಚ್ಚಿನ ಪುಸ್ತಕಗಳು ಶ್ರೀಮಠದ ಪ್ರಕಾಶನ ಸಂಸ್ಥೆಯಿಂದ ಮುದ್ರಣಗೊಂಡಿವೆ. ಶ್ರೀಮಠದ ಪ್ರಕಾಶನ ಸಂಸ್ಥೆ ಅತ್ಯುತ್ತಮ ಪ್ರಕಾಶನ ಸಂಸ್ಥೆ ಪ್ರಶಸ್ತಿಗೆ ಭಾಜನವಾಗಿದೆ.

ಶ್ರೀಗಳು 'ಗೃಹಸ್ಥರ ಮನೆಯಲ್ಲಿ ಪುತ್ರೋತ್ಸವ, ಮಠಗಳಲ್ಲಿ ಪುಸ್ತಕೋತ್ಸವ' ಎಂದು ಹೇಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಶ್ರೀಗಳು ಪ್ರತಿವರ್ಷ ಶ್ರೀಮಠದಿಂದ 15ರಿಂದ 20 ಪುಸ್ತಕಗಳ ಪ್ರಕಟಣೆ ಮಾಡುತ್ತಿದ್ದರು. ಪುಸ್ತಕಗಳು ಮಕ್ಕಳ ಸಂಸ್ಕೃತಿಯ ಪ್ರತೀಕ. ಪಾಲಕರು ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಬೆಳೆಸಬೇಕು ಎಂದು ಶ್ರೀಗಳು ನುಡಿದರು.



'ಶಿವಶರಣೆಯರ ವಚನಾನುಭವ' ಕುರಿತು ಶರಣೆ ಗಿರಿಜಕ್ಕ ಧರ್ಮರೆಡ್ಡಿ ಪ್ರವಚನ ನೀಡಿದರು. ದಾಸೋಹ ಸೇವೆಯನ್ನು ದಾವಣಗೇರಿಯ ಶಾಂತರಾಜು ಮಾಗನೂರ, ಗದುಗಿನ ಶರಣ ಶಂಕರ್ ಚಳ್ಳಮರದ ವಹಿಸಿಕೊಂಡಿದ್ದರು. ಧರ್ಮಗಂಥ ಪಠಣವನ್ನು ಶ್ರೇಯಾ ಜೆ.ಬಡಿಗೇರ, ವಚನ ಚಿಂತನೆಯನ್ನು ಪ್ರತೀಕ್ಷಾ ಜೆ.ಬಡಿಗೇರ ಮಾಡಿದರು. ವಚನ ಸಂಗೀತವನ್ನು ಅಶೋಕ್ ಸುತಾರ ಹಾಗೂ ಗುರುನಾಥ್ ಸುತಾರ ನೆಡೆಸಿಕೊಟ್ಟರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಬಾಲಚಂದ್ರ ಭರಮಗೌಡ್ರ ಸ್ವಾಗತಿಸಿದರು. ಐ.ಬಿ. ಬೆನಕೊಪ್ಪ ಕಾರ್ಯಕ್ರಮ ನಿರೂಪಿಸಿದರು.

'ತೋಂಟದಾರ್ಯ ಮಠದ ಗ್ರಂಥ ಪ್ರಕಟಣೆಗಳು' ವಿಷಯವಾಗಿ ಧಾರವಾಡದ ಜಿ.ಎಂ. ಹೆಗಡೆಯವರು ಉಪನ್ಯಾಸ ನೀಡಿ, ಲಿಂಗೈಕ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಸಾಮಾನ್ಯರ ಸ್ವಾಮಿಜಿಯಾಗಿ, ಕನ್ನಡದ ಸ್ವಾಮಿಜಿಯಾಗಿ, ಕೋಮು ಸೌಹಾರ್ದತೆಯ ಹರಿಕಾರರಾಗಿ ಕನ್ನಡ ನಾಡು-ನುಡಿಗೆ, ಗಡಿಭಾಗಕ್ಕೆ, ಪರಿಸರಕ್ಕೆ, ಸಮಾಜದ ಶ್ರೇಯೋಭಿವೃದ್ಧಿಗೆ ಹಗಲಿರುಳು ಶ್ರಮಿಸಿದ್ದಾರೆ. ಶ್ರೀಮಠದಿಂದ ನಾಡಿನ ಸಾಧಕರ, ಮಹನೀಯರ, ಪುಣ್ಯಪುರುಷರ ಕುರಿತಾದ ಅನೇಕ ಮೌಲಿಕ ಕೃತಿಗಳು ಮುದ್ರಣಗೊಂಡಿವೆ. ಶ್ರೀಗಳ ಪುಸ್ತಕ ಪ್ರೀತಿಯ ಕಾರಣವಾಗಿ ನಾಡಿನ ತುಂಬ ಪುಸ್ತಕದ ಸ್ವಾಮೀಜಿ ಎಂಬ ಅಭಿದಾನಕ್ಕೆ ಪಾತ್ರಾಗಿದ್ದರು ಎಂದರು.

ಉಪಾಧ್ಯಕ್ಷ ಉಮೇಶ ಪುರದ, ವಿದ್ಯಾವತಿ ಪ್ರಭು ಗಂಜಿಹಾಳ, ಕಾರ್ಯದರ್ಶಿ ವೀರಣ್ಣ ಗೋಟಡಕಿ, ಸಹಕಾರ್ಯದರ್ಶಿ ಸೋಮನಾಥ ಪುರಾಣಿಕ, ನಾಗರಾಜ ಹಿರೇಮಠ, ಸಂಘಟನಾ ಕಾರ್ಯದರ್ಶಿ ಮಹೇಶ ಗಾಣಿಗೇರ, ಕೋಶಾಧ್ಯಕ್ಷ ಬಸವರಾಜ ಕಾಡಪ್ಪನವರ, ಶಿವಾನುಭವ ಸಮಿತಿ ಚೇರಮನ್ ಐ.ಬಿ. ಬೆನಕೊಪ್ಪ, ಶಿವಾನುಭವ ಸಮಿತಿ ಸಹ ಚೇರಮನ್ ಶಿವಾನಂದ ಹೊಂಬಳ ಉಪಸ್ಥಿತರಿದ್ದರು.

### ಹರದಗಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪೋಷಕರ ಸಭೆ

# ಶಾಲೆಗಳ ಅಭಿವೃದ್ಧಿಗೆ ಶ್ರಮಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗದಗ, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾ ಪಂಚಾಯತ ಗದಗ/ತಾಲೂಕ ಪಂಚಾಯತ ಲಕ್ಷ್ಮೇಶ್ವರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಶಿರಹಟ್ಟಿ ಇವರ ಸಹಯೋಗದಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಸಾಮಾಜಿಕ ಪರಿಶೋಧನಾ ಪ್ರಯುಕ್ತ ಶಾಲಾ ಸಭೆ/ಪೋಷಕರ ಸಭೆಯನ್ನು ಶನಿವಾರ ಸಮೀಪದ ಹರದಗಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯ ವ್ಯವಸ್ಥಾಪಕ ಎಂ. ಮರಿಬಸನಗೌಡರ ಮಾತನಾಡಿ, ಶಾಲೆಯ ಅಭಿವೃದ್ಧಿಗಾಗಿ ಶಾಲಾ ಅಭಿವೃದ್ಧಿ ಸಮಿತಿ ಸೇರಿದಂತೆ ಪಾಲಕರು, ಶಿಕ್ಷಕರು ಶ್ರಮಿಸಿದಾಗ ಮಾತ್ರ ಶಾಲೆಯು ಅಭಿವೃದ್ಧಿ ಹೊಂದಲು ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲ ಶಾಲೆಗಳಲ್ಲಿ ಇರುವ ಸಮಸ್ಯೆಗಳ ನಿವಾರಣೆಗೆ ಸಕ್ರಿಯವಾಗಿ ಪಾಲ್ಗೊಂಡು ಆಯಾ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ರವಿ ಟಿ.ಲಮಾಣಿ ಮತ್ತು ಶಾಲೆಯ ಮುಖ್ಯೋಪಾಧ್ಯಾಯ ಎಲ್.ಎನ್. ನಂದೆಣ್ಣವರ್ ಮಾತನಾಡಿ, ಶಾಲೆಯ ಅಭಿವೃದ್ಧಿಗಾಗಿ ಈಗಾಗಲೇ ಹಲವಾರು ಕಾಮಗಾರಿ ನಡೆಯುತ್ತಿದೆ ಮತ್ತು ಕೊರತೆ ಇರುವ ಕಾಮಗಾರಿಗಾಗಿ ಆದ್ಯತೆ ನೀಡಲಾಗುವದು ಎಂದರು.

ಇಂದಿನ ಕಾರ್ಯಕ್ರಮದಲ್ಲಿ ಶಾಲೆಯ ಅಭಿವೃದ್ಧಿ ಬಗ್ಗೆ ಜನರ ಅಭಿಪ್ರಾಯ ಪಡೆದು, ಶಾಲೆಯ ಅಭಿವೃದ್ಧಿಯ ಲೆಕ್ಕ ಪರಿಶೋಧನೆ ನಡೆಸಲಾಗಿದೆ. ಹಲವಾರು ರೀತಿಯಲ್ಲಿ ಶಾಲಾ ಅಭಿವೃದ್ಧಿಯ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗಿದ್ದು, ಶಾಲೆಯಲ್ಲಿ ಶೌಚಾಲಯಯದ ಕೊರತೆ, ಮತ್ತು ಶಿಕ್ಷಕರ ಕೊರತೆಯ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಲಾಗುವುದು ಎಂದರು.

ಸಿ.ಎಸ್. ನೇಕಾರ ಸ್ವಾಗತಿಸಿದರು. ಎಸ್.ಆರ್. ನದಾಫ್ ನಿರೂಪಿಸಿದರು. ಪಿ.ವಾಯ್. ಮ್ಯಾಗೇರಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಎನ್.ಎನ್. ಶಿಗ್ಲಿ, ವಿ.ಪಿ. ಸುಗ್ನಳ್ಳಿ, ಅರುಣ ಬೇತುರವ್ಮಠ, ಪರಿಶೋಧನಾ ಸಿಬ್ಬಂದಿ ಶಂಕ್ರಪ್ಪ ಯತ್ತಿನಹಳ್ಳಿ, ನಿರ್ಮಲಾ ಕಬಾಡೆ, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ರವಿ ಲಮಾಣಿ, ಮಂಗೇಶ ಲಮಾಣಿ ಮತ್ತು ಊರಿನ ಹಿರಿಯರಾದ ಯಂಕಪ್ಪ ಲಮಾಣಿ, ನಾಗೇಶ ಕಾರಭಾರಿ, ಸುರೇಶ ಲಮಾಣಿ ಮತ್ತಿತರಿದ್ದರು.

### ಲಕ್ಷ್ಮೇಶ್ವರದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರತಿಕ್ರಿಯೆ

# ಕೇಂದ್ರ ಸರಕಾರ ಸುಭದ್ರವಾಗಿದೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಶನಿವಾರ ಪಟ್ಟಣಕ್ಕೆ ಅನಿರೀಕ್ಷಿತ ಭೇಟಿ ನೀಡಿದರು. ಮದ್ಯಾಹ್ನ ಶಾಸಕ ಡಾ.ಚಂದ್ರು ಲಮಾಣಿ ಅವರ ಬಾಲಾಜಿ ಆಸ್ಪತ್ರೆಗೆ ಆಗಮಿಸಿದ ಜೋಶಿಯವರನ್ನು ಶಾಸಕರು ಹೂಗುಚ್ಛ ನೀಡಿ ಸ್ವಾಗತಿಸಿದರು. ನಂತರ ಆಸ್ಪತ್ರೆಯ ಆವರಣದಲ್ಲಿ ಅವರನ್ನು ಕಾರ್ಯಕರ್ತರ ಪರವಾಗಿ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 3ನೇ ಅವಧಿಗೆ ಕೇಂದ್ರದಲ್ಲಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಿದ್ದು, ಉತ್ತಮ ಆಡಳಿತ ನೀಡುತ್ತಿದೆ. ಕೇಂದ್ರ ಸರಕಾರದ ಎಲ್ಲ ನಿರ್ಣಯಗಳು ತ್ವರಿತಗತಿಯಲ್ಲಿ ನಡೆಯುತ್ತಿವೆ ಎಂದರು.



ಇನ್ನೂ ಕೆಲವೇ ದಿನಗಳಲ್ಲಿ ಕೇಂದ್ರ ಸರಕಾರ ಪತನವಾಗುತ್ತದೆ ಎನ್ನುವ ಇಂಧನ ಸಚಿವ ಕೆ.ಜೆ. ಜಾರ್ಜ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಹ್ಲಾದ ಜೋಶಿ, ಮೊದಲು ತಮ್ಮ ಕಾಂಗ್ರೆಸ್ ಪಕ್ಷದಲ್ಲಿ ಏನಾಗುತ್ತಿದೆ ಎನ್ನುವದನ್ನು ಅರಿತುಕೊಂಡು ಮಾತನಾಡಲಿ. ಆಮೇಲೆ ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಲಿ ಎಂದು ಲೇವಡಿ ಮಾಡಿದರು.

ಮುಡಾ ಹಗರಣಕ್ಕೆ ಸಂಬಂಧಿಸಿ ರಾಜ್ಯಪಾಲರು ಸಂವಿಧಾನಬದ್ಧವಾಗಿ ಪ್ರಾಸಿಕ್ಯೂಷನ್ ಅನುಮತಿ ಕೊಟ್ಟಿದ್ದಾರೆ. ಆದರೆ ಅದನ್ನು ಟೀಕೆ ಮಾಡುತ್ತಿರುವ ಕಾಂಗ್ರೆಸ್‌ನವರು ತನಿಖೆ ಮಾಡಬಾರದು ಎಂದು ಹೇಳುವುದು ಹಾಸ್ಯಾಸ್ಪದವಾಗಿದೆ. ಕಾಂಗ್ರೆಸ್‌ನವರು ಪ್ರತಿಭಟನೆ ಮಾಡುತ್ತಿರುವುದು ಜನರ ಗಮನ ಬೇರೆಡೆ ಸೆಳೆಯುವ ಉದ್ದೇಶದಿಂದ ಎಂದು ಆರೋಪಿಸಿದರಲ್ಲದೆ, ಹಿಂದೂ ಸಮಾಜ ಜಾಗೃತರಾಗಿರುವುದರಿಂದ ಭಯಪಟ್ಟು ಸಿದ್ದರಾಮಯ್ಯ ಟೆಂಪಲ್ ರನ್ ನಡೆಸಿದ್ದಾರೆ ಎಂದು ಪ್ರಹ್ಲಾದ ಜೋಶಿ ಲೇವಡಿ ಮಾಡಿದರು.

ಮಠಕ್ಕೆ ಭೇಟಿ ನೀಡಿದ ಉದ್ದೇಶದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಶ್ರೀಮಠದಲ್ಲಿ ಹಿರಿಯ ಫಕ್ಕೀರ ಸಿದ್ದರಾಮ ಶ್ರೀಗಳು ಇದ್ದಾರೆ. ಮೊದಲೆಲ್ಲ ಮಠಕ್ಕೆ ಬಂದು ಹೋಗುತ್ತಿದ್ದೆವು..ಈ ಹಿನ್ನೆಲೆಯಲ್ಲಿ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆಯಲು ಬಂದಿದ್ದೇನೆ ಎಂದುತ್ತರಿಸಿದರು.

ಈ ಸಂದರ್ಭದಲ್ಲಿ ಶಾಸಕ ಡಾ. ಚಂದ್ರು ಲಮಾಣಿ, ಕುಂದಗೋಳ ಶಾಸಕ ಎಂ.ಆರ್. ಪಾಟೀಲ್, ರವಿ ದಂಡಿನ, ಮಾಜಿ ವಿಧಾನ ಪರಿಷತ್ ಸದಸ್ಯ ನಾಗರಾಜ ಛಬ್ಬಿ, ಶರಣು ಅಂಗಡಿ, ಶಿರಹಟ್ಟಿ ಮಂಡಳ ಬಿಜೆಪಿ ಅಧ್ಯಕ್ಷ ಸುನೀಲ ಮಹಾಂತಶೆಟ್ಟರ, ನಗರ ಘಟಕದ ಅಧ್ಯಕ್ಷ ನವೀನ ಬೆಳ್ಳಟ್ಟಿ, ಬಸವರಾಜ ಪಲ್ಲೇದ, ಬಸವರಾಜ ಚಕ್ರಸಾಲಿ, ನೀಲಪ್ಪ ಹತ್ತಿ, ಸೋಮೇಶ ಉಪನಾಳ, ಅನಿಲ ಮುಳುಗುಂದ, ಸಂತೋಷ ಜಾವೂರ, ಪ್ರಕಾಶ ಮಾದನೂರ, ಗಿರೀಶ ಚೌರಡ್ಡಿ, ಸೇರಿದಂತೆ ಕಾರ್ಯಕರ್ತರು ಇದ್ದರು.

**ಕರ್ನಾಟಕ ಸರ್ಕಾರ**

**ಕಂದಾಯ ಇಲಾಖೆ**

**ಭೂಸ್ವಾಧೀನ ಕಾಯ್ದೆಯ ಕಲಂ19 (1) ರೊಂದಿಗೆ ಓದಲಾದ ಪ್ರಕರಣ19 (2)ರ ಅನ್ವಯ ಘೋಷಣೆ**

**ಸಂಖ್ಯೆ: ಕಂಇ 20 ಎಕ್ಯೂಡಿ 2023** **ಸಂ: ದಿನಾಂಕ: 28-06-2024**

ಗದಗ ಜಿಲ್ಲೆ ಗದಗ ಗ್ರಾಮದ ಸರ್ವೆ ನಂ. 260 ರಲ್ಲಿರುವ ಗದಗ ಮೃಗಾಲಯವನ್ನು ವಿಸ್ತರಿಸಿ ಅಭಿವೃದ್ಧಿಪಡಿಸಲು ಅಗತ್ಯವಿರುವ ಗದಗ ಜಿಲ್ಲೆ ಗದಗ ತಾಲೂಕಿನ ಗದಗ ಗ್ರಾಮದ ಗದಗ ಗ್ರಾಮದ ಸರ್ವೇ ನಂ.266 ಮತ್ತು 267 ರ ಜಮೀನನ್ನು ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶಕತೆ ಕಂಡು ಬಂದಿದ್ದರಿಂದ ಹಾಗೂ ಈ ಯೋಜನೆಗೆ **ಭೂಸ್ವಾಧೀನತೆ ಪ್ರಕ್ರಿಯೇಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013 (2013** ಕೇಂದ್ರ ಅಧಿನಿಯಮ ಸಂಖೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಸುವಂತೆ ದಿನಾಂಕ:23-07-2019 ರಿಂದ ಜಾರಿಗೆ ಬಂದಿರುವ **ಭೂಸ್ವಾಧೀನತೆ ಪ್ರಕ್ರಿಯೇಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಹಾಗೂ ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019** ರ ಕರ್ನಾಟಕ ಅಧಿನಿಯಮ ಸಂಖ್ಯೆ:16 ) ರ ಕಲಂ (ಎ) ರಡಿ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ, ಸಂಖ್ಯೆ:ಕಂಇ 20 ಎಕ್ಯೂಡಿ 2022, ದಿನಾಂಕ: 03-09-2022 ಸರ್ಕಾರದ ಅಧಿಸೂಚನೆಯನ್ನು ಹೊರಡಿಸಿದ್ದರ ಮೇರೆಗೆ 2013 ರ ಮೂಲ ಕಾಯ್ದೆಯ ಕಲಂ 11(1) ರಡಿ ಕ್ರಮಾಂಕ:ಎಲ್‌ಎಕ್ಯೂ/ಸಿಆರ್/26/2023-24 ದಿನಾಂಕ:18-11-2023 ರಲ್ಲಿ ಅಧಿಸೂಚನೆ ದಿನಾಂಕ:18-11-2023 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಿದಂತೆ ಕಲಂ 15(1) ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ/ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಆಲಿಸಿದ ನಂತರ ಹಾಗೂ ಸೂಕ್ತ ವಿಚಾರಣಾ ವರದಿಯನ್ನು ನಡೆಸಿದ ನಂತರ ವಿಚಾರಣಾ ವರದಿಯನ್ನು ಸರ್ಕಾರದ ಪತ್ರ ಸಂಖ್ಯೆ:ಕಂಇ 20 ಎಕ್ಯೂಡಿ 2023 ದಿನಾಂಕ: 28-02-2024 ರಲ್ಲಿ ಒಪ್ಪಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ದೇಶನ ನೀಡಲಾಗಿದೆ.

**ಭೂಸ್ವಾಧೀನತೆ ಪ್ರಕ್ರಿಯೇಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಹಾಗೂ ಪುನರ್ ನಿರ್ಮಾಣ ಕಾಯ್ದೆ-2013 ರ** ಕಲಂ 19(1) ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳವುದು ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವದರಿಂದ, ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಜಮೀನುಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮ 19(1) ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಅದರಂತೆ ಸದರಿ ಭೂಸ್ವಾಧೀನ ನಿಯಮ 3ನೇ ಪ್ರಕರಣದ (ಜಿ) ಖಂಡದ ಮೇರೆಗೆ **ಉಪ-ವಿಭಾಗಾಧಿಕಾರಿಗಳು ಗದಗ ಉಪ-ವಿಭಾಗ, ಗದಗ ಜಿಲ್ಲೆ** ಇವರನ್ನು ಸದರಿ ಜಮೀನುಗಳ ಸ್ವಾಧೀನತೆಯ ಮುಂದಿನ ಎಲ್ಲಾ ಕಾನೂನು ಕ್ರಮ ಮತ್ತು ಪ್ರಕ್ರಿಯೆಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯವನ್ನು ನಿರ್ವಹಿಸುವ ಸಲುವಾಗಿ ಈ ಮೂಲಕ ನೇಮಕ ಮಾಡಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 04 ಎಕ್ಯೂಬಿ 2022 ದಿನಾಂಕ: 28-03-2022 ರನ್ವಯ ಸದರಿ ಯೋಜನೆಗೆ 2013 ರ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ 2013 ರ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಅವಕಾಶಗಳ ಬದಲಾಗಿ ನೀಡಲಾಗುವ ಒಂದು ಇಡಿಗಂಟು ಮೊತ್ತವನ್ನು **ಭೂಸ್ವಾಧೀನತೆ ಪ್ರಕ್ರಿಯೇಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಹಾಗೂ ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು-2020 ರ** ನಿಯಮ 29(5) ನಿಗಧಿಪಡಿಸಲು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದರಿ ಅಧಿನಿಯಮದ ಕಲಂ -21(1) ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆಯ ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ವಿವರವನ್ನು ಸೂಚಿಸುವ ಒಂದು ನಕಾಶೆಯನ್ನು ಸಾರ್ವಜನಿಕ ಹಿತಾಸಕ್ತಿದಾರರ ಅವಗಾಹನೆಗಾಗಿ ಭೂಸ್ವಾಧೀನಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಗದಗ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ.

**ಅನುಸೂಚಿ**

(ಕ್ರ.ಎಲ್‌ಎಕ್ಯೂ/ಸಿ.ಆರ್/ 08 /2023-24)

ಜಿಲ್ಲೆ: ಗದಗ ತಾಲೂಕು: ಗದಗ ಹೋಬಳಿ: ಗದಗ ಗ್ರಾಮ: ಗದಗ

| ಅ ನಂ | ಖಾತೆದಾರರ / ಅನುಭವದಾರರ ಹೆಸರು (ಜೆ.ಎಂ.ಸಿ ರನ್ವಯ) | ಸರ್ವೆ/ ಖಾತಾ ನಂಬರ್ | ಹಿಸ್ಸಾ ನಂ. | ಸ್ವಾಧೀನಕ್ಕೊಳಪಡುವ ಒಟ್ಟು ಕ್ಷೇತ್ರ (ಕಲಂ-11(1) ರನ್ವಯ) | | ತರಹೆ | ಸ್ವಾಧೀನಕ್ಕೊಳಪಡುವ ಒಟ್ಟು ಕ್ಷೇತ್ರ | | ತರಹೆ | ಸರಹದ್ದು | | | | ಮರ (ಮಾಲ್ಕಿ)ಗಳ ವಿವರ | ಷರಾ |
|---|---|---|---|---|---|---|---|---|---|---|---|---|---|---|---|
| | | | | ಕೃಷಿ | ಖರಾಬು | | ಕೃಷಿ | ಖರಾಬು | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| 1 | 1) ಬೂದಿಹಾಳ ಶಿವಬಸಪ್ಪ ತಂ.ಶಿವಲಿಂಗಪ್ಪ 2) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಾ.ಹೆ. ಸಂ. 63. 3) ಮಲಪ್ರಭಾ ಬಲದಂಡೆ ಕಾಲುವೆ ಭೂಸ್ವಾಧೀನ | 266 | 4 | 0ಎ-05ಗುಂ | - | ಖುಷ್ಕಿ | 00ಎ-05ಗುಂ | - | ಖುಷ್ಕಿ | ನಾಲಾ | ಹಳ್ಳವು | ರಿ.ಸ.ನಂ. 266/3 | ರಿ.ಸ.ನಂ. 266/5 | - | - |
| 2 | 1) ಬೂದಿಹಾಳ ಶಿವಬಸಪ್ಪ ತಂ.ಶಿವಲಿಂಗಪ್ಪ 2) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಾ.ಹೆ. ಸಂ. 63. 3) ಮಲಪ್ರಭಾ ಬಲದಂಡೆ ಕಾಲುವೆ ಭೂಸ್ವಾಧೀನ | 266 | 5 | 1ಎ-18ಗುಂ | - | ಖುಷ್ಕಿ | 00ಎ-35ಗುಂ | - | ಖುಷ್ಕಿ | ರಸ್ತೆ (ರಾ.ಹ) | ಹಳ್ಳವು | ರಿ.ಸ.ನಂ. 266/4 | ರಿ.ಸ.ನಂ. 267 | ಹುಣಸೆ ಮರಗಳು | - |
| 3 | 1) ಕಾರದಕಟ್ಟಿ ರಾಜಶೇಖರ ತಂ. ಚನ್ನವೀರಪ್ಪ 2) ಕಾರದಕಟ್ಟಿ ರಾಜಕುಮಾರ ತಂ. ಚನ್ನವೀರಪ್ಪ 3) ಕಾಳೆ ನೀಲವ್ವ ಕೋಂ.ಮಲ್ಲಪ್ಪ 4) ಖಮಿತ್ಕರ ಗಂಗವ್ವ ಕೋಂ. ರಾಮಚಂದ್ರಪ್ಪ 5) ಕಾರದಕಟ್ಟಿ ಮಧುಮತಿ ತಂ. ಚನ್ನವೀರಪ್ಪ | 267 | 1 | 2ಎ-12ಗುಂ | - | ಖುಷ್ಕಿ | 2ಎ-12ಗುಂ | - | ಖುಷ್ಕಿ | ರಿ.ಸ.ನಂ 267/3 | ಹಳ್ಳವು | ರಿ.ಸ.ನಂ. 266 | ರಿ.ಸ.ನಂ. 267/2 | - | - |
| 4 | ಕಾರದಕಟ್ಟಿ ಶಂಭುಲಿಂಗಪ್ಪ ವೀರಪ್ಪ | 267 | 2 | 4ಎ-04ಗುಂ | - | ಖುಷ್ಕಿ | 4ಎ-04ಗುಂ | - | ಖುಷ್ಕಿ | ರಿ.ಸ.ನಂ 267/ 3267/ 4267/5 | ಹಳ್ಳವು | ರಿ.ಸ.ನಂ. 267/1 | ರಿ.ಸ.ನಂ. 270 | 1-ತೇರದ ಬಾವಿ, 1-ಮಾವಿನ ಮರ, 1-ಹುಣಸೆಮರ, 4-ತೆಂಗಿನಮರ, 2-ತೇಗಿನ ಮರ, 3-ಬೇವಿನಮರ, 2-ಬನ್ನಿಮರ 1-ಅರಳಿಮರ, ಸೋಗಿನ ಮರ, 2-ಬಾರಿಗಿಡ | - |
| 5 | 1) ಅಮೃತ ತಂ.ಶಂಕರಸಾ ಪಟ್ಟಣ 2) ಬಾಕಳೆ ಗಜಾನನ ಅರವಿಂದ 3) ಹಬೀಬ ದೇವೆಂದ್ರಸಾ ಪರಶುರಾಮಸಾ | 267 | 3 | 0ಎ-33ಗುಂ | - | ಖುಷ್ಕಿ | 0ಎ-33ಗುಂ | - | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/1, 267/2 | ರಿ.ಸ.ನಂ. 266 | ರಿ.ಸ.ನಂ. 267/4 | 10-ತೇಗಿನ ಮರ | - |
| 6 | 1) ಗಣೇಶ ವಿಶ್ವನಾಥಸಾ ಶಿದ್ಲಿಂಗ 2 ವಂದನಾ ಕೋಂ. ಗಣೇಶ ಶಿದ್ಲಿಂಗ 3) ಶ್ರೀಕಾಂತ ನಾರಾಯಣಸಾ ಲದವಾ 4) ವೈಶಾಲಿ ಕೋಂ. ಶ್ರೀಕಾಂತ ಲದವಾ | 267 | 4 | 2ಎ-03ಗುಂ | - | ಖುಷ್ಕಿ | 2ಎ-03ಗುಂ | - | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/2 | ರಿ.ಸ.ನಂ. 267/3 | ರಿ.ಸ.ನಂ. 267/5 | 5-ತೇಗಿನ ಮರ | - |
| 7 | 1) ಪರಶುರಾಮ ತಂ.ಶಂಕರಸಾ ಖಟವಟೆ 2) ವಿನಾಯಕ ತಂ.ಅರುಣ ಖಟವಟೆ 3) ಸಾಗರ ತಂ.ಡೊಂಗರಸಾ ಪವಾರ 4) ಆನಂದ ತಂ.ಬಾಬಾಸಾ ಭಾಂಡಗೆ | 267 | 5 | 2ಎ-25ಗುಂ | - | ಖುಷ್ಕಿ | 2ಎ-25ಗುಂ | - | ಖುಷ್ಕಿ | ರಸ್ತೆ (ರಾ.ಹೆ) | ರಿ.ಸ.ನಂ. 267/2 | ರಿ.ಸ.ನಂ. 267/4 | ರಿ.ಸ.ನಂ. 270 271 | - | - |
| | **ಒಟ್ಟು** | | | **12ಎ-37ಗುಂ** | | | **12ಎ-37ಗುಂ** | - | | | | | | | |

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಶ್ರೀನಿವಾಸ. ಎ)**

**ಸರ್ಕಾರದ ಅದೀನ ಕಾರ್ಯದರ್ಶಿ**

**ಕಂದಾಯ ಇಲಾಖೆ (ಭೂಸ್ವಾಧೀನ-1&3).**

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka